# ಮೆಗಾ ಮೀಡಿಯಾ ನ್ಯೂಸ್

ದಕ್ಷಿಣ ಕರಾವಳಿಯ ಸುಂದರ ಕನ್ನಡ ಪಾಕ್ಷಿಕ

A www.megamedianews.com publication

Mega Media News
Kannada Fortnightly

ಸಂಪುಟ 11 ಸಂಚಿಕೆ 2 ಮಂಗಳೂರು ಜುಲೈ 15-31 2021 RNI No. KARKAN/2011/47430 ಪುಟ 8 ಬೆಲೆ 8/-




# ಕಾಂಗ್ರೆಸ್ ಕೈಗೆ ದೈವದ ಕಡ್ಸಲೆ ಇನಾಮು




# ಗಂಡನ

## ಅಕ್ರಮ ಸಂಬಂಧವೇ ವಿಶಾಲ ಗಾಣಿಗ ಹತ್ಯೆಗೆ ಕಾರಣ




## ವರ್ಷದ ಮೊದಲೇ ತುಕ್ಕು ಹಿಡಿಯಲಾರಂಭಿಸಿದ ನೇತ್ರಾವತಿ ಸೇತುವೆ ತಡೆ ಬೇಲಿ

## ಕಟೀಲು ದುರ್ಗೆ ಬಗ್ಗೆ ಅಶ್ಲೀಲ ಪದ, ದೇವಳಕ್ಕೆ ಬಂದು ಕ್ಷಮೆ ಯಾಚನೆ



## 'ಅಭತರ' ತುಳು ಸಿನೆಮಾ ಅಕ್ಟೊಬರ್‌ನಲ್ಲಿ ರಿಲೀಸ್



# ಕೊರೊನಾ ಮೂರನೆಯ ಅಲೆಯ ಪರಿಣಾಮದ ಬಗ್ಗೆ ಅರಿತುಕೊಳ್ಳಿ

ಕೊರೊನಾದ ಎರಡು ಅಲೆಗಳು ಉಂಟು ಮಾಡಿದ ಭೀತಿಯ ನಡುವೆ ಮೂರನೇ ಅಲೆ ಕುರಿತು ಹಲವು ಅಧ್ಯಯನಗಳು ನಡೆಯುತ್ತಿದ್ದು, ಆಗಸ್ಟ್ ಕೊನೆ ವೇಳೆಗೆ ಭಾರತದಲ್ಲಿ ಮೂರನೇ ಅಲೆ ಕಾಣಿಸಿಕೊಳ್ಳಲಿದೆ ಎಂದು ಐಸಿಎಂಆರ್ ಅಧ್ಯಯನ ತಿಳಿಸಿದೆ.



ಸಂಪಾದಕ ಶಿವಪ್ರಸಾದ್

ಕೊರೊನಾ ಮೂರನೇ ಅಲೆಯನ್ನು ಪ್ರೇರೇಪಿಸಬಲ್ಲ ನಾಲ್ಕು ಅಂಶಗಳನ್ನು ನಾವು ಗಮನಿಸಬೇಕಿದೆ. ಮೊದಲನೆಯದಾಗಿ, ರೋಗನಿರೋಧಕ ಶಕ್ತಿಯಲ್ಲಿನ ಕುಗ್ಗುವಿಕೆ. ಜನರಲ್ಲಿ ರೋಗನಿರೋಧಕ ಶಕ್ತಿ ಕುಗ್ಗಿದರೆ ಮೂರನೇ ಅಲೆಯಲ್ಲಿ ಸೋಂಕಿನ ಸಂಖ್ಯೆ ಹೆಚ್ಚಳವಾಗಬಹುದು. ಎರಡನೆಯದಾಗಿ, ಕೊರೊನಾ ರೂಪಾಂತರಗಳು. ರೋಗನಿರೋಧಕ ಶಕ್ತಿಯನ್ನು ಮೀರಿ ಗಂಭೀರ ರೂಪ ತಾಳಬಲ್ಲ ರೂಪಾಂತರಗಳು ಮೂರನೇ ಅಲೆಗೆ ಪ್ರಚೋದನೆ ನೀಡಬಹುದು ಎಂಬ ಅಂಶಗಳು ಅಧ್ಯಯನದಿಂದ ಬೆಳಕಿಗೆ ಬಂದಿದೆ.

ದೇಶದಲ್ಲಿ ಸಂಭಾವ್ಯ ಕೊರೊನಾ ಮೂರನೇ ಅಲೆ ಕುರಿತು ಆತಂಕ ಶುರುವಾಗಿದ್ದು, ಈ ಅಲೆಯ ಪರಿಣಾಮಗಳ ಕುರಿತ ಚರ್ಚೆಗಳು ಈಗಾಗಲೇ ಆರಂಭಗೊಂಡಿವೆ. ಈ ಅಲೆಯಲ್ಲಿ ಮಕ್ಕಳಿಗೆ ಹೆಚ್ಚಿನ ಪ್ರಮಾಣದಲ್ಲಿ ಸೋಂಕು ತಗುಲುವ ಎಚ್ಚರಿಕೆಯನ್ನು ಕೆಲವು ತಜ್ಞರು ನೀಡಿದ್ದಾರೆ. ಈ ಬೆನ್ನಲ್ಲೇ ಐಸಿಎಂಆರ್ ವೈದ್ಯರೊಬ್ಬರು ಸಮಾಧಾನಕರ ಸಂಗತಿಯೊಂದನ್ನು ತಿಳಿಸಿದ್ದಾರೆ.

ಆಗಸ್ಟ್ ತಿಂಗಳ ಕೊನೆಯ ವೇಳೆಗೆ ಭಾರತದಲ್ಲಿ ಕೊರೊನಾ ಮೂರನೇ ಅಲೆ ಕಾಣಿಸಿಕೊಳ್ಳಬಹುದು. ಆದರೆ ಈ ಅಲೆಯ ತೀವ್ರತೆ ಎರಡನೇ ಅಲೆಯಷ್ಟು ಇರುವುದಿಲ್ಲ ಎಂದು ಇಂಡಿಯನ್ ಕೌನ್ಸಿಲ್ ಆಫ್ ಮೆಡಿಕಲ್ ರಿಸರ್ಚ್‌ನ ಸಾಂಕ್ರಾಮಿಕ ರೋಗಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ಸಮೀರನ್ ಪಾಂಡಾ ತಿಳಿಸಿದ್ದಾರೆ.

ರಾಷ್ಟ್ರಾದ್ಯಂತ ಕೊರೊನಾ ಮೂರನೇ ಅಲೆ ಕಾಣಿಸಿಕೊಳ್ಳಲಿದೆ. ಆದರೆ ಅದು ಎರಡನೇ ಅಲೆಯಷ್ಟು ಅಪಾಯಕಾರಿ ಎನ್ನಲಾಗುವುದಿಲ್ಲ" ಎಂದಿದ್ದಾರೆ. ಸಂಭಾವ್ಯ ಕೊರೊನಾ ಮೂರನೇ ಅಲೆ ಕುರಿತು ಕೆಲವು ಮಾಹಿತಿಗಳನ್ನು ಗಮನಿಸ ಬಹುದು.

ಮೂರನೆಯದಾಗಿ, ಕೊರೊನಾ ಸೋಂಕು ದಿನಕ್ಕೊಂದು ರೂಪಾಂತರ ಪಡೆಯುತ್ತಿದ್ದು, ಈ ರೂಪಾಂತರಗಳು ಮೂಲ ಸೋಂಕಿಗಿಂತ ಅತಿ ವೇಗವಾಗಿ ಹರಡುತ್ತಿವೆ. ಈ ಒಂದು ಲಕ್ಷಣದಿಂದ ಸೋಂಕಿನ ಪ್ರಕರಣಗಳ ಸಂಖ್ಯೆ ಏರುಗತಿಯಲ್ಲಿ ಸಾಗಿ ಮೂರನೇ ಅಲೆಗೆ ಕಾರಣವಾಗಬಹುದು ಎನ್ನಲಾಗಿದೆ. ಕೊನೆಯದಾಗಿ, ಯಾವುದೇ ಮುಂಜಾಗ್ರತೆಯಿಲ್ಲದೇ ರಾಜ್ಯಗಳು ನಿರ್ಬಂಧಗಳನ್ನು ಸಡಿಲಿಸುತ್ತಿರುವುದು ಹೊಸ ಕೊರೊನಾ ಪ್ರಕರಣಗಳ ಏರಿಕೆಗೆ ಕಾರಣವಾಗಬಹುದು ಎಂದು ಅಂದಾಜಿಸಲಾಗಿದೆ. ಈ ನಾಲ್ಕು ಅಂಶಗಳ ಮೇಲೆ ನಿಗಾ ಇಟ್ಟಲ್ಲಿ ಮೂರನೇ ಅಲೆ ತೀವ್ರತೆಯನ್ನು ನಿಯಂತ್ರಿಸಬಹುದು ಎಂದು ಸಲಹೆಗಾರರು ಹೇಳಿದ್ದಾರೆ.

ಗ್ರಾಮೀಣ ಪ್ರದೇಶದಲ್ಲಿ ಮಕ್ಕಳು ಕೂಡಿಕೊಂಡು ಆಟ ಆಡೋದು ಸಹಜ. ಇದರಿಂದ ಕೋವಿಡ್ ಹರಡುವ ಸಾಧ್ಯತೆ ಹೆಚ್ಚು. ಪೋಷಕರು ಮಕ್ಕಳನ್ನು ಸುರಕ್ಷಿತವಾಗಿ ಮನೆಯಲ್ಲಿಯೇ ಇರುವಂತೆ ನೋಡಿಕೊಂಡರೆ ಉತ್ತಮ. ಮದುವೆ ಹಾಗೂ ಇತರೆ ಕಾರ್ಯಕ್ರಮಗಳಿಗೆ ಹೋಗದಂತಿದ್ದರೆ ಒಳಿತು.

ಕೊರೊನಾ ಅಲೆ ಮೂರನೇ ಅಲೆ ಎದುರಿಸಲು ಆರೋಗ್ಯ ಇಲಾಖೆ ಸಕಲ ಸಿದ್ಧತೆ ಮಾಡಿಕೊಳ್ಳುತ್ತಿದೆ.

# ಮಂಜೇಶ್ವರದ ಗ್ರಾಮಗಳ ಕನ್ನಡದ ಹೆಸರುಗಳ ಮಲಯಾಳೀಕರಣ

ಕೇರಳದಲ್ಲಿ ಕನ್ನಡವನ್ನು ಸಂಪೂರ್ಣ ನಿರ್ನಾಮ ಮಾಡ ಹೊರಟಿರುವ ಪಿಣರಾಯಿ ಸರಕಾರ ಕಾಸರಗೋಡು ಜಿಲ್ಲೆಯ ಮಂಜೇಶ್ವರ ಹಾಗೂ ಅಲ್ಲಿನ ಕೆಲವು ಗ್ರಾಮಗಳ ಕನ್ನಡದ ಹೆಸರುಗಳನ್ನು ಮಲಯಾಳಂ ಭಾಷೆಗೆ ಬದಲಾಯಿಸಿ ನಾಮಫಲಕಗಳನ್ನು ಅಳವಡಿಸುತ್ತಿದೆ.

ಕೇರಳ ಸರ್ಕಾರದ ಈ ನಡೆಯನ್ನು ಕರ್ನಾಟಕ ಗಡಿ ಅಭಿವೃದ್ಧಿ ಪ್ರಾಧಿಕಾರ ಖಂಡಿಸಿದೆ.

'ಮಧೂರು–ಮಧುರಮ್, ಮಲ್ಲ–ಮಲ್ಲಮ್, ಕಾರಡ್ಕ–ಕಡಗಮ್, ಬೇದಡ್ಕ–ಬೆಡಗಮ್, ಪಿಲಿಕುಂಜೆ–ಪಿಲಿಕುನ್ನು, ಆನೆಬಾಗಿಲು–ಆನೆವಾಗಿಲ್, ಮಂಜೇಶ್ವರ–ಮಂಜೇಶ್ವರಮ್, ಹೊಸದುರ್ಗ–ಪುದಿಯಕೋಟ, ಕುಂಬಳೆ–ಕುಂಬ್ಳಾ, ಸಸಿಹಿತ್ಲು–ಶೈವಲಪ್, ನೆಲ್ಲಿಕುಂಜ–ನೆಲ್ಲಿಕುನ್ನಿ' ಇವುಗಳ ಮೂಲ ಹೆಸರನ್ನೆ ಬದಲಾಯಿಸಿ ಕನ್ನಡದ ಕುರುಹು ಕೂಡ ಇರಬಾರದು ಎನ್ನುವುದು ಪಿಣರಾಯಿ ಸರಕಾರದ ನಡೆಯಾಗಿದೆ ಎಂದು ಅಲ್ಲಿನ ಕನ್ನಡಿಗರು ಹೇಳಿದ್ದಾರೆ.

ಕೇರಳ ಸರಕಾರವು ಮಂಜೇಶ್ವರ ಹಾಗೂ ಕಾಸರಗೋಡಿನ ಕೆಲವು ಹಳ್ಳಿಗಳ ಹೆಸರನ್ನು ಬದಲಾಯಿಸಿ ಮಲಯಾಳಂ ಭಾಷೆಯ ಹೆಸರುಗಳನ್ನು ನೀಡಲು ಹೊರಟಿರುವುದು ಆ ಭಾಗದ ಕನ್ನಡಿಗರ ಪರಂಪರಾಗತ ಭಾವನೆಗಳಿಗೆ ಧಕ್ಕೆ ತರುವಂತಾಗಿರುತ್ತದೆ. ಇಂತಹ



ಬದಲಾವಣೆಗಳನ್ನು ತರಲು ಪ್ರಯತ್ನಿಸುವ ಮುನ್ನ ಆ ಭಾಗದ ಕನ್ನಡಿಗರ ಅಭಿಪ್ರಾಯವನ್ನು ಅಥವಾ ಅಲ್ಲಿನ ನಾಗರಿಕರ ಅಭಿಪ್ರಾಯವನ್ನು ಕೇಳಿಲ್ಲ ಎಂದು ಪ್ರಾಧಿಕಾರ ಆಕ್ಷೇಪ ವ್ಯಕ್ತಪಡಿಸಿದೆ.

ಶಿಕ್ಷಣದಲ್ಲೂ ಕೇರಳ ಸರಕಾರ ಕನ್ನಡಿಗ ಮಕ್ಕಳನ್ನು ವಂಚಿಸುತ್ತಿದೆ. ಕನ್ನಡದ ಗಂಧಗಾಳಿಯಿಲ್ಲದ ಶಿಕ್ಷಕರನ್ನು ನೇಮಿಸುತ್ತಿರುವುದರಿಂದ ಪಾಠ ಅರ್ಥವಾಗದ ಮಕ್ಕಳ ಗೋಳು ಕೇಳುವವರಿಲ್ಲ.ಪೋಷಕರ ಪ್ರತಿಭಟನೆಗೂ ಮಕ್ಕಳ ಉಪವಾಸ ಸತ್ಯಾಗ್ರಹಕ್ಕೂ ಅಧಿಕಾರಿಗಳು ಮಣಿಯುತ್ತಿಲ್ಲ. ಪ್ರತಿಭಟನೆ ತೀವ್ರವಾದರೆ ಈ ಅನರ್ಹ ಶಿಕ್ಷಕರನ್ನು ಮೈಸೂರಿನ ಪ್ರದೇಶಿಕ ಭಾಷಾ ಶಿಕ್ಷಣಕೇಂದ್ರಕ್ಕೆ ಕಳುಹಿಸಿ ಆರು ತಿಂಗಳು ಶಿಶುವಿಹಾರ ಮಟ್ಟದ ಕನ್ನಡ ಕಲಿಕೆಯ ಪ್ರಹಸನ ನಡೆಸಿ ಮತ್ತೆ ಅದೇ ಶಾಲೆಗಳಲ್ಲಿ ನೇಮಿಸಿ ಮಲಯಾಳದಲ್ಲಿ ಪಾಠ ಮಾಡಿಸಲಾಗುತ್ತಿರುವುದು ಕನ್ನಡದ ದಮನಕ್ಕೆ ಮತ್ತೊಂದು ಸಾಕ್ಷಿಯಾಗಿದೆ.

ಇತ್ತೀಚೆಗೆ ಕಾಸರಗೋಡಿನಲ್ಲಿ ಕನ್ನಡದಲ್ಲಿ ಯಾವ ಮಾಹಿತಿಯೂ ಸಾಮಾನ್ಯ ಜನರಿಗೆ ದೊರೆಯುತ್ತಿಲ್ಲ. ಉತ್ತರ ಕೇರಳದಲ್ಲಿ ಅಸ್ತಿತ್ವದಲ್ಲೇ ಇಲ್ಲದ ಓಣಂ ಹಬ್ಬವನ್ನು ಕಡ್ಡಾಯವಾಗಿ ಆಚರಿಸುವಂತೆ ಮಾಡಲಾಗುತ್ತಿದೆಯಲ್ಲದೆ ಶಾಲೆಗಳಲ್ಲಿ ಕನ್ನಡ ಮಕ್ಕಳು ದಸರಾ ಆಚರಿಸಲು ಕೂಡ ಅವಕಾಶ ನೀಡುತ್ತಿಲ್ಲದಿರುವುದು ಮತ್ತೊಂದು ದುರಂತ.


ಭಾಷಿಕವಾಗಿ ಸಾಂಸ್ಕೃತಿಕವಾಗಿ ಅವಿಭಜಿತ ದಕ್ಷಿಣಕನ್ನಡವನ್ನು ಹೋಲುವ ಈ ಪ್ರದೇಶದಲ್ಲಿ ಕನ್ನಡ, ತುಳು, ಮರಾಠಿ, ಕೊಂಕಣಿ, ಉರ್ದು, ಬ್ಯಾರಿ, ಸ್ಥಳೀಯ ಮಲಯಾಳ ಮೊದಲಾದ ಭಾಷೆಗಳನ್ನಾಡುವವರು ಕನ್ನಡಶಾಲೆಗಳಲ್ಲಿ ಕಲಿಯುತ್ತ ಪರಂಪರಾಗತವಾಗಿ ಅಚ್ಚಗನ್ನಡಿಗರಾಗಿದ್ದರು. ಇಂದು ಆಡಳಿತ, ವ್ಯವಹಾರ, ಶಿಕ್ಷಣ, ಸಂಸ್ಕೃತಿ ಮೊದಲಾದ ವಿವಿಧ ರಂಗಗಳಲ್ಲಿ ಮಲಯಾಳ ಹೇರಿಕೆಯ ಪರಿಣಾಮವಾಗಿ ಕನ್ನಡಿಗರ ಮನೆಮಾತು ಕೂಡ ಮಲಯಾಳವಾಗಿ ಬದಲಾಗುತ್ತಿದೆ.

# ಕಂಬಳ ಓಟಗಾರ ಶ್ರೀನಿವಾಸ ಗೌಡರಿಗೆ ಕೊಲೆ ಬೆದರಿಕೆ

ಪ್ರಸಿದ್ಧ ಕಂಬಳ ಓಟಗಾರ, ಕಂಬಳದ ಹುಸೇನ್ ಬೋಲ್ಟ್ ಎಂದೇ ಪ್ರಸಿದ್ಧ ಪಡೆದಿರುವ ಮಿಜಾರು ಅಶ್ವಥಪುರ ಶ್ರೀನಿವಾಸ ಗೌಡಗೆ ರಾಮ ಸೇನೆಯ ಕಾರ್ಯಕರ್ತ ಕೊಲೆ ಬೆದರಿಕೆ ಹಾಕಿರುವ ಘಟನೆ ನಡೆದಿದೆ.

ರಾಮ ಸೇನೆಯ ಕಾರ್ಯಕರ್ತ ಪ್ರಶಾಂತ ಬಂಗೇರ ಕೊಲೆ ಬೆದರಿಕೆ ಹಾಕಿರುವ ವ್ಯಕ್ತಿಯಾಗಿದ್ದು, ಕಂಬಳದ ವಿಚಾರಕ್ಕೆ ಸಂಬಂಧಿಸಿದಂತೆ ಶ್ರೀನಿವಾಸ ಗೌಡರಿಗೆ ಕರೆ ಮಾಡಿ ಪ್ರಶಾಂತ ಬಂಗೇರ ಅವಾಚ್ಯವಾಗಿ ಬೈದಿದ್ದಾನೆ.

ಮಂಗಳೂರಿನ ಕಾರ್ ಸ್ಟ್ರೀಟ್‌ನಲ್ಲಿರುವ ರಾಮ ಸೇನೆ ಕಚೇರಿಗೆ ಬರಬೇಕೆಂದು ಧಮ್ಕಿ ಹಾಕಿದ್ದಾನೆ. ಅಲ್ಲದೇ ಶ್ರೀನಿವಾಸ ಗೌಡ ಮನೆಯ ಹೆಣ್ಣುಮಕ್ಕಳ ಕುರಿತಾಗಿಯೂ ಅಮಾನಕಾರಿಯಾಗಿ ನಿಂದಿಸಿದ್ದಾನೆ. ಈ ಬಗ್ಗೆ ಶ್ರೀನಿವಾಸ ಗೌಡ ಮೂಡಬಿದಿರೆ ಪೊಲೀಸ್



ಠಾಣೆಗೆ ಪ್ರಶಾಂತ ಬಂಗೇರ ವಿರುದ್ಧ ದೂರು ನೀಡಿದ್ದಾರೆ.

ಈ ಬಗ್ಗೆ ಮೂಡಬಿದರೆಯ ಸಮಾಜ ಮಂದಿರದಲ್ಲಿ ಖಂಡನಾ ಸಭೆ ನಡೆದಿದ್ದು, ಖಂಡನಾ ಸಭೆಯಲ್ಲಿ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಕಂಬಳ ಕೋಣಗಳ ಯಜಮಾನರು, ಕಂಬಳ ಸಂಘಟಕರು, ಕಂಬಳ ತೀರ್ಪುಗಾರರು, ಕಂಬಳ ಓಟಗಾರರು, ಕೋಣ ಬಿಡಿಸುವವರು, ಕೋಣಗಳ ಎಲ್ಲಾ ಸಿಬ್ಬಂದಿ ವರ್ಗದವರು ಹಾಗು ಕಂಬಳ ಅಭಿಮಾನಿಗಳು ಭಾಗವಹಿಸಿದ್ದರು.

ಮಾಜಿ ಸಚಿವ ಅಭಯಚಂದ್ರ ಜೈನ್, ಮೂಡಬಿದರೆಯ ಶಾಸಕ ಉಮಾನಾಥ್ ಕೋಟ್ಯಾನ್ ಈ ಬೆದರಿಕೆ ಘಟನೆಯನ್ನು ಖಂಡಿಸಿದ್ದಾರೆ.

ಪ್ರಶಾಂತ ಬಂಗೇರ ನನ್ನ ಪೊಲೀಸರು ಬಂಧಿಸಿದ್ದಾರೆ

# ವರ್ಷದ ಮೊದಲೇ ತುಕ್ಕು ಹಿಡಿಯಲಾರಂಭಿಸಿದ ನೇತ್ರಾವತಿ ಸೇತುವೆ ತಡೆ ಬೇಲಿ

## 55 ಲಕ್ಷ ರೂ. ವೆಚ್ಚದಲ್ಲಿ 800 ಮೀ. ಉದ್ದಕ್ಕೆ ತಡೆ ಬೇಲಿ ನಿರ್ಮಾಣ



ಮಂಗಳೂರಿನಿಂದ ತೊಕ್ಕೊಟ್ಟು ರಾಷ್ಟ್ರೀಯ ಹೆದ್ದಾರಿ ಉಳ್ಳಾಲ ನೇತ್ರಾವತಿ ಸೇತುವೆಗೆ ಆತ್ಮಹತ್ಯೆ ತಡೆಯಲು ನಿರ್ಮಾಣ ಮಾಡಿದ ತಡೆ ಬೇಲಿ ತುಕ್ಕು ಹಿಡಿಯಲಾರಂಭಿಸಿದೆ. ಸುಮಾರು 55 ಲಕ್ಷ ರೂ ವೆಚ್ಚ ಮಾಡಿದ ತಡೆ ಬೇಲಿ ಸೂಕ್ತ ಸುರಕ್ಷತಾ ಕ್ರಮ ಇಲ್ಲದೆ ಖರ್ಚು ಮಾಡಿದ ಹಣ ಪೋಲಾಗಿ ಹೋಗುತ್ತಿದೆ.

ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ ನಿರ್ಮಿಸಿದ ಈ ಕಾಮಗಾರಿ ಉದ್ಘಾಟನೆಗೊಂಡು ಎಂಟು ತಿಂಗಳು ಪೂರ್ಣಗೊಳ್ಳುವ ಮೊದಲೇ ತುಕ್ಕು ಹಿಡಿದಿದೆ.

ಶಾಸಕ ವೇದವ್ಯಾಸ ಕಾಮತ್ ನೇತೃತ್ವದಲ್ಲಿ ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ 55 ಲಕ್ಷ ರೂ. ವೆಚ್ಚದಲ್ಲಿ 800 ಮೀ. ಉದ್ದಕ್ಕೆ ತಡೆ ಬೇಲಿ ನಿರ್ಮಾಣ ಮಾಡಿದೆ.

ನೇತ್ರಾವತಿ ಸೇತುವೆಯಿಂದ ನದಿಗೆ ಹಾರಿ ಕಾಫಿ ಡೇ ಮಾಲೀಕ ಸಿದ್ದಾರ್ಥ ಹೆಗ್ಡೆ ಸಹಿತ 15ಕ್ಕೂ ಅಧಿಕ ಮಂದಿ ಆತ್ಮಹತ್ಯೆ ಮಾಡಿಕೊಂಡಿದ್ದರು. ಸಾರ್ವಜನಿಕರು ಕೋಳಿ ತ್ಯಾಜ್ಯ, ಮೊದಲಾದ ತ್ಯಾಜ್ಯಗಳನ್ನು ಇಲ್ಲೇ ಸುರಿಯುತ್ತಿದ್ದರು.

ಮಂಗಳೂರಿನಿಂದ ತೊಕ್ಕೊಟ್ಟು ಕಡೆಗೆ ಹೋಗುವ ಹಾಗೂ ತೊಕ್ಕೊಟ್ಟಿನಿಂದ ಮಂಗಳೂರು ಕಡೆಗೆ ಬರುವ ಎರಡು ಸೇತುವೆಗಳಿದ್ದು, ಈ ಎರಡೂ ಸೇತುವೆಗಳಿಗೆ ಎರಡೂ ಬದಿ ರಕ್ಷಣಾ ಬೇಲಿ ಅಳವಡಿಸಲಾಗಿದೆ. ತಡೆಗೋಡೆ ಮೇಲೆ ಬೇಲಿಯು 5 ಅಡಿ ಎತ್ತರವಿದ್ದು, ಅದರ ಮೇಲೆ 1 ಅಡಿಯಷ್ಟು ಮುಳ್ಳು ತಂತಿ ಇದೆ.

ಬೇಲಿಯನ್ನು ಕಬ್ಬಿಣದ ಸರಳುಗಳನ್ನು ಉಪಯೋಗಿಸಿ ಸೇತುವೆಗೆ ವೆಲ್ಡಿಂಗ್ ಮಾಡಿ ಜೋಡಿಸಲಾಗಿತ್ತು. ಬೇಲಿಯ ಮೇಲೂ ಹತ್ತಲು ಸಾಧ್ಯವಾಗದಂತೆ ಮೇಲ್ಭಾಗಕ್ಕೂ ನಾಲ್ಕು ಸಾಲು ಮುಳ್ಳುತಂತಿಯನ್ನು ಜೋಡಣೆ ಮಾಡಲಾಗಿದೆ. ಉದ್ಘಾಟನೆಗೊಂಡು ವರ್ಷವಾಗುವುದರೊಳಗೆ ಇದಕ್ಕೆ ತುಕ್ಕು ಹಿಡಿಯಲಾರಂಭಿಸಿದ್ದು, ಹೆಚ್ಚು ಕಾಲ ಬಾಳ್ವಿಕೆ ಬರುವುದು ಅನುಮಾನ ಎನ್ನಲಾಗಿದೆ.

ಸ್ಟೀಲ್ ಅಥವಾ ಅಲ್ಯೂಮಿನಿಯಂನಂತಹ ತುಕ್ಕು ಹಿಡಿಯದ ಸಾಮಗ್ರಿಗಳು ಲಭ್ಯವಿದೆ. ಕಡಿಮೆ ವೆಚ್ಚದ ಗುಣಮಟ್ಟವಿಲ್ಲದ ಕಬ್ಬಿಣದ ಸಾಮಗ್ರಿ ಅಳವಡಿಸಿರುವುದರಿಂದ ತುಕ್ಕು ಹಿಡಿಯುವಂತಾಗಿದೆ. ಕಾಮಗಾರಿ ಯೋಜನೆ ಮಾಡುವಾಗಲೇ ಗುಣಮಟ್ಟದ ತುಕ್ಕು ಹಿಡಿಯದ ಸಾಮಗ್ರಿಗಳನ್ನು ಅಳವಡಿಸಲು ಗುತ್ತಿಗೆ ಸಂಸ್ಥೆಗೆ ಸೂಚನೆ



ನೀಡಬೇಕಿತ್ತು. ನಿರ್ಮಾಣ ಮಾಡುವ ಇಂಜಿನಿಯರ್‌ಗಳು ಸೇರಿ ಕಳಪೆ ಗುಣಮಟ್ಟದ ವಸ್ತುಗಳನ್ನು ಹಾಕಿದ್ದಾರೆ ಎಂದು ಸಾರ್ವಜನಿಕರು ಅಭಿಪ್ರಾಯಪಟ್ಟಿದ್ದಾರೆ.

ನೇತ್ರಾವತಿ ಸೇತುವೆಗೆ ತಡೆ ಬೇಲಿ ಹಾಕಿದ ಬಳಿಕ ಇಲ್ಲಿ ನದಿಗೆ ಹಾರಿ ಆತ್ಮಹತ್ಯೆ ಮಾಡಿಕೊಳ್ಳುವವರ ಸಂಖ್ಯೆ ಬಹಳಷ್ಟು ಕಡಿಮೆಯಾಗಿದೆ. ಜತೆಗೆ ಗುಣಮಟ್ಟದ ಸಿಸಿ ಕ್ಯಾಮರಾ ಕೂಡ ಅಳವಡಿಸಿ ಮಂಗಳೂರು ನಗರ ಪೊಲೀಸ್ ಠಾಣೆಗೆ ಸಂಪರ್ಕ ಕಲ್ಪಿಸಲಾಗಿದೆ. ಇದರಿಂದ ಸೇತುವೆ ಮೇಲೆ ನಡೆಯುವ ಚಟುವಟಿಕೆಗಳ ಮೇಲೆ ಪೊಲೀಸರು ನಿಗಾ ಇಟ್ಟಿದ್ದಾರೆ. ವಾಹನಗಳಲ್ಲಿ ಬಂದು ಸೇತುವೆ ಮೇಲಿನಿಂದ ನದಿಗೆ ಕಸ ಬಿಸಾಡುವವರ ಸಂಖ್ಯೆಯೂ ಕಡಿಮೆಯಾಗಿದೆ. ತಡೆ ಬೇಲಿ ಎತ್ತರ ಇರುವ ಕಾರಣ ಕಸ ಬೇಲಿಯಲ್ಲೇ ಸಿಕ್ಕಿ ಹಾಕಿಕೊಳ್ಳುತ್ತದೆ.

ಕಡಿಮೆ ಗುಣಮಟ್ಟದ ಕಬ್ಬಿಣ ಬಳಸಿರುವುದರಿಂದ ಬಹು ಬೇಗನೆ ಹಾಳಾಗುತ್ತಿದೆ. ಸ್ಟೀಲ್ ಅಥವಾ ಅಲ್ಯೂಮಿನಿಯಂ ಬಳಕೆ ಮಾಡುತ್ತಿದ್ದರೆ ತುಕ್ಕು ಹಿಡಿಯುತ್ತಿರಲಿಲ್ಲ. 55 ಲಕ್ಷ ರೂ. ವೆಚ್ಚ ಮಾಡಿದ ಯೋಜನೆ ಇಷ್ಟು ಬೇಗ ಹಾಳಾಗುವುದರಿಂದ ಸಾರ್ವಜನಿಕರಿಗೆ ಆಗುತ್ತಿರುವ ದೊಡ್ಡ ನಷ್ಟ ಎಂದು ಜನ ಹೇಳುತ್ತಿದ್ದಾರೆ.

ಜಪ್ಪಿನಮೊಗರು ನೇತ್ರಾವತಿ ಸೇತುವೆ ತಡೆಬೇಲಿಗೆ ತುಕ್ಕು ಹಿಡಿಯದಂತೆ ಅಂಡರ್ ಕೋಟಿಂಗ್ ಮಾಡಿ ಪೈಂಟ್ ಮಾಡಲಾಗಿದೆ. ಉಪ್ಪಿನ ಅಂಶ ಇರುವ ಸಮುದ್ರದಿಂದ ಗಾಳಿ ನೇರವಾಗಿ ಬೀಸುವುದರಿಂದ ತುಕ್ಕು ಹಿಡಿಯತ್ತದೆ. ಶೀಘ್ರದಲ್ಲಿ ಅದಕ್ಕೆ ಮತ್ತೆ ಪೈಂಟಿಂಗ್ ಮಾಡದಿದ್ದರೆ ಕಾಮಗಾರಿ ಸಂಪೂರ್ಣ ನಾಶವಾಗುತ್ತದೆ ಎಂಬುದು ಸಾರ್ವಜನಿಕರ ಅಭಿಪ್ರಾಯ.

ಮಂಗಳೂರಿನಲ್ಲಿ ಸಮುದ್ರದಿಂದ ಉಪ್ಪಿನ ಅಂಶ ಇರುವ ಗಾಳಿ ಬೀಸುವುದರಿಂದ ಕಬ್ಬಿಣದ ವಸ್ತುಗಳಿಗೆ ಬಹು ಬೇಗನೆ ತುಕ್ಕು ಹಿಡಿಯುತ್ತದೆ. ನೇತ್ರಾವತಿ ಸೇತುವೆ ಬಳಿಯಲ್ಲೇ ಸಮುದ್ರ ಇರುವುದರಿಂದ ಗಾಳಿ ನೇರವಾಗಿ ಸೇತುವೆ ಕಡೆಗೆ ಬೀಸುತ್ತದೆ. ಇದರ ಮೂಲಕ ಬರುವ ಉಪ್ಪಿನ ಅಂಶಗಳು ತಡೆಬೇಲಿ ತುಕ್ಕು ಹಿಡಿಯುವಂತೆ ಮಾಡಿದೆ. ದಪ್ಪವಾಗಿ ಪೈಂಟ್ ಬಳಿದು ಆಗಾಗ ಇದರ ನಿರ್ವಹಣೆ ಮಾಡಿದರೆ ಒಂದಷ್ಟು ಸಮಯ ಗಟ್ಟಿಯಾಗಿ ಉಳಿಸಿಕೊಳ್ಳಬಹುದು.

# ಆನ್‌ಲೈನ್, ಆಫ್‌ಲೈನ್‌ನಲ್ಲಿ ಕಿರುಚಿತ್ರ ಸ್ಪರ್ಧೆ

ಪ್ರಧಾನ ಮಂತ್ರಿ ಆವಾಸ್ ಯೋಜನೆಯು ಆರು ವರ್ಷಗಳನ್ನು ಪೂರ್ಣಗೊಳಿಸಿರುವ ಹಿನ್ನೆಲೆಯಲ್ಲಿ ಕುಶಿಯೋನ್ ಕಾ ಆಶಿಯನಾ – ವಿಷಯಾಧಾರಿತ ಕಿರುಚಿತ್ರ ಸ್ಪರ್ಧೆಗಾಗಿ ಆಫ್‌ಲೈನ್ ಅಥವಾ ಆನ್‌ಲೈನ್ ಕಾರ್ಯಗಾರ ಹಮ್ಮಿಕೊಳ್ಳಲಾಗಿದೆ.

ಫಲಾನುಭವಿಗಳ ಜೀವನದಲ್ಲಿ ತಂದ ಬದಲಾವಣೆಗಳು ಎಂಬ ವಿಷಯದ ಮೇಲೆ ಕಿರುಚಿತ್ರ ಸ್ಪರ್ಧೆಯಲ್ಲಿ ಫಲಾನುಭವಿಗಳು, ವಿದ್ಯಾರ್ಥಿಗಳು, ಯುವಕರು, ಸಂಘ ಸಂಸ್ಥೆಗಳು ಭಾಗವಹಿಸಬಹುದು.

ಅಂತರ್ಜಾಲ ತಾಣ https://pmay-urban.gov.in ನಲ್ಲಿ ನೋಂದಾಯಿಸಿಕೊಂಡು ಗೂಗಲ್ ಪ್ಲೇಸ್ಟೋರ್‌ನಲ್ಲಿ ಲಭ್ಯವಿರುವ PMAY(U) ಆಪ್ಲಿಕೇಶನ್‌ನಲ್ಲಿ ಚಿತ್ರೀಕರಿಸಿದ ಕಿರುಚಿತ್ರವನ್ನು 2021 ರ ಸೆಪ್ಟೆಂಬರ್ 10 ರೊಳಗೆ ಅಪ್ಲೋಡ್ ಮಾಡಬಹುದು.

ಕೇಂದ್ರ ಸರ್ಕಾರವು ಸ್ಪರ್ಧೆಯ ಫಲಿತಾಂಶವನ್ನು 2021ರ ಸೆಪ್ಟೆಂಬರ್ 30 ರಂದು ಘೋಷಿಸಲಿದೆ. ವಿಜೇತರಿಗೆ ಪ್ರಥಮ ಬಹುಮಾನ (ಎಲ್ಲಾ ರಾಜ್ಯದಿಂದ 25 ಜನರಿಗೆ) 25,000 ರೂ.ಗಳು, ದ್ವಿತೀಯ ಬಹುಮಾನ (ಎಲ್ಲಾ ರಾಜ್ಯದಿಂದ 25 ಜನರಿಗೆ) 20,000 ರೂ.ಗಳು, ಹಾಗೂ ತೃತೀಯ ಬಹುಮಾನ (ಎಲ್ಲಾ ರಾಜ್ಯದಿಂದ 25 ಜನರಿಗೆ) 12,500 ರೂ.ಗಳು ನಗದನ್ನು ಬಹುಮಾನವಾಗಿ ನೀಡಲಾಗುತ್ತದೆ.

ಹೆಚ್ಚಿನ ಮಾಹಿತಿಗೆ ಜಿಲ್ಲಾ ನಗರಾಭಿವೃದ್ಧಿ ಕೋಶ ಕಚೇರಿಯ ಸಿ.ಎಲ್.ಟಿ.ಸಿ ತಜ್ಞರು ಅಥವಾ ನಗರ ಸ್ಥಳೀಯ ಸಂಸ್ಥೆಗಳಿಗೆ ಸಂಪರ್ಕಿಸುವಂತೆ ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ದೈವದ ಕಡ್ಸಲೆ ಇನಾಮು, ತುಳುನಾಡಿನ ಸಂಸ್ಕೃತಿಗೆ ಅಪಮಾನ

## ಕೆಪಿಸಿಸಿ ರಾಜ್ಯ ಅಧ್ಯಕ್ಷ ಡಿ.ಕೆ ಶಿವಕುಮಾರ್ ಕೈಯಲ್ಲಿ ದೈವದ ಕಡ್ಸಲೆ

ದೈವದ ಕಡ್ಸಲೆಯನ್ನು ದೈವದ ಪಾತ್ರಿ ಮತ್ತು ದೈವದ ಪೂಜನೆಯ ಗಡಿ ಹಿಡಿದವರನ್ನು ಹೊರತುಪಡಿಸಿ ಇತರರು ಹಿಡಿಯುವಂತಿಲ್ಲ. ಅದರಲ್ಲೂ ಪಾತ್ರಿಯನ್ನು ಹೊರತು ಪಡಿಸಿ ಇತರರು ಕಡ್ಸಲೆಯ ಮೂಲಕ್ಕೆ (ಹಿಡಿಕೆಗೆ) ಕೈ ಹಾಕಿ ದೈವ ಹಿಡಿವಂತೆ ಹಿಡಿಯುವ ಹಾಗಿಲ್ಲ. ಆಗಿದ್ದರೂ ತುಳುನಾಡಿನಲ್ಲೇ ಕಾಂಗ್ರಸ್ಸಿಗರು ಕಡ್ಸಲೆಯನ್ನು ಬಹಿರಂಗವಾಗಿ ವೇದಿಕೆಗೆ ತಂದು ಇನಾಮುಕೊಟ್ಟಿರುವುದು ತುಳುನಾಡಿಗರು ವಿಮರ್ಶಿಸಬೇಕಾದ ಸಂಗತಿ.

ಕಡ್ಸಲೆಯನ್ನು ಇತರರು ಅಗತ್ಯ ಸಂದರ್ಭದಲ್ಲಿ ಹಿಡಿಕೆಗೆ ಕೈಹಾಕದೆ ಕಡ್ಸಲೆಯ ಕೆಳಭಾಗ ಮತ್ತು ಅಲಗನ್ನು ಎರಡೂ ಕೈಗಳಲ್ಲಿ ಹಿಡಿದು ಕಡ್ಸಲೆಯನ್ನು ದೈವಕ್ಕೆ ಒಪ್ಪಿಸಬೇಕಾದುದು ಪದ್ಧತಿ ಆದರೆ ಅದನ್ನು ವೇದಿಕೆಯಲ್ಲಿ ಈ ರೀತಿ ಮಾಡುವುದು ಎಷ್ಟು ಸರಿ ಎಂಬುದನ್ನು ತುಳುವರು ಯೋಚಿಸಬೇಕಿದೆ.

ದೈವಾರಾಧನೆ ದಕ್ಷಿಣ ಕನ್ನಡ ಮತ್ತು ಉಡುಪಿಯಲ್ಲಿ ವ್ಯತ್ಯಾಸ ಇದ್ದರೂ ದೈವದ ಕಡ್ಸಲೆಯನ್ನು ಎಲ್ಲರೂ ಮುಟ್ಟುವಂತಹ ಅವಕಾಶ ಇರುವುದಿಲ್ಲ ಎನ್ನುವುದು ಗಮನಾರ್ಹ. ಅಷ್ಟೇ ಅಲ್ಲದೆ ಕೋಲ-ನೇಮಗಳ ನಡುವೆ ಆಯುಧ ಬದಲಾಯಿಸುವ ಅಥವಾ ಹಿಂದಕ್ಕೆ ನೀಡುವ ಅಗತ್ಯ ಬಿದ್ದಾಗಲೂ ಕಡ್ಸಲೆಯನ್ನು ನಿಗದಿತ ವ್ಯಕ್ತಿಗಳೇ ಸ್ವೀಕರಿಸುವುದು ಪದ್ಧತಿ.

ದೈವಗಳು ಸಾಮಾನ್ಯವಾಗಿ ಭಕ್ತರ ಅಂಗೈ ಮೇಲೆ ಕಡ್ಸಲೆಯನ್ನು ಹಿಡಿದು ಅಥವಾ ತಾಗಿಸಿ ಅಭಯ ನೀಡುವುದು ವಾಡಿಕೆ. ಕೆಲವೆಡೆ ಚವಲ/ ಪುಂಚಲದ ಮೂಲಕ ಅಭಯ ನೀಡುವ ಪದ್ಧತಿಯೂ ಇದ್ದರೂ ಅದು ತೀರಾ ಕಡಿಮೆ.

ದೈವವೊಂದು ಕಡ್ಸಲೆಯನ್ನು ಬಳಸಿ ಸಾಂಕೇತಿಕವಾಗಿ ಮಾಯದ ಗಡಿ ಹಾಕಿಕೊಂಡರೂ, ಕಡ್ಸಲೆಗೆ ರಕ್ತ ತಾಗದಿದ್ದರೂ, ಕಡ್ಸಲೆಗೆ ನೀರು ಸುರಿದು ಗಂಧ ಹಚ್ಚಿದ ಬಳಿಕ ದೈವದ ಮಂಚದ ಮೇಲಿಡುತ್ತೇವಲ್ಲವೇ? ದೈವಕ್ಕೆ ಹೊಸ ಕಡ್ಸಲೆ ಅರ್ಪಿಸುವುದಿದ್ದರೂ ಅದಕ್ಕೊಂದು ಜೀವಾದಿ (ಕೋಳಿಬಲಿ) ಕೊಟ್ಟ ಬಳಿಕ ನೀರಿನಲ್ಲಿ ತೊಳೆದು ಕುರ್ನೀರಲ್ಲಿ (ಅರಶಿನ - ಸುಣ್ಣಮಿಶ್ರಿತ ನೀರು) ಮುಳುಗಿಸಿ ತೀರ್ಥ ಸಿಂಪಡಿಸಿದ ಬಳಿಕವಷ್ಟೇ ದೈವಕ್ಕೆ ಒಪ್ಪಿಸುತ್ತಾರೆ.

ಕಡ್ಸಲೆಯನ್ನು ದೈವಗಳು ಹಿಡಿಯುವ ರೀತಿ ಹೇಗೆ? ಬಲಗೈಯಲ್ಲಿ ಮೇಲ್ಮುಖವಾಗಿ ಹಿಡಿಯುವುದು. ಒಂದು ದೈವದ ಕಡ್ಸಲೆಯನ್ನು ಅನಿವಾರ್ಯ ಸಂದರ್ಭಗಳಲ್ಲಿ ಇನ್ನೊಂದು ದೈವದ ಕೋಲ/ ನೇಮಕ್ಕೆ ಬಳಸಬಹುದು. ಆದರೆ ಇತರ ಸಮಯದಲ್ಲಿ ಒಂದು ದೈವದ ಕಡ್ಸಲೆಯನ್ನು ಇನ್ನೊಂದು ದೈವದ ಮಂಚದಲ್ಲಿ ಇಡುವುದಿಲ್ಲ.



ಕೆಪಿಸಿಸಿ ರಾಜ್ಯ ಅಧ್ಯಕ್ಷ ಡಿ.ಕೆ ಶಿವಕುಮಾರ್ ಅವರಿಗೆ ದೈವಗಳಿಗೆ ಹರಕೆಯಾಗಿ ನೀಡುವ ಕಡ್ಸಲೆಯನ್ನು ನೀಡಿ ಉಡುಪಿ ಜಿಲ್ಲೆಯ ಕಾಂಗ್ರೆಸ್ ನಾಯಕರು ಸನ್ಮಾನ ಮಾಡಿದ್ದಾರೆ. ದೈವ ಪಾತ್ರಿ, ಭೂತಾರಾಧನೆ ಸಂದರ್ಭ ದೈವ ನರ್ತಕರು ಮಾತ್ರ ಕಡ್ಸಲೆ ಹಿಡಿದುಕೊಳ್ಳುತ್ತಾರೆ. ಆದರೆ ಅದನ್ನು ಡಿ.ಕೆ ಶಿವಕುಮಾರ್ ಗೆ ಕೊಟ್ಟು, ಧಾರ್ಮಿಕವಾಗಿ ಬಹಳ ಪವಿತ್ರವಾಗಿರುವ ಕಡ್ಸಲೆಯನ್ನು ಅವಮಾನ ಮಾಡಿದ್ದಾರೆ ಎಂದು ದೈವಾರಾಧಕರು ಭೂತರಾದನೆಯ ಮೇಲೆ ನಂಬಿಕೆ ಇರುವವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಉಡುಪಿ ಜಿಲ್ಲಾ ಕಾಂಗ್ರೆಸ್ಸಿನಲ್ಲಿ ಡಿಕೆಶಿಗೆ ಸನ್ಮಾನ ಮಾಡುವ ಸಂದರ್ಭ ಕಾಂಗ್ರೆಸ್ ನಾಯಕರು ಕಡ್ಸಲೆ ಕೊಟ್ಟು ತುಳುನಾಡಿನ ನಂಬಿಕೆ ಮತ್ತು ಆರಾಧನೆಗೆ ಅಪಮಾನಮಾಡಿದ್ದಾರೆ ಎಂದು ಹೇಳಲಾಗಿದೆ. ಅವರನ್ನು ಉಡುಪಿ ಪ್ರವಾಸದ ವೇಳೆ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಪದಾಧಿಕಾರಿಗಳ ಸಭೆಯನ್ನು ನಡೆಸಿ ಬೆಳ್ಳಿಯ ಕತ್ತಿ ಯನ್ನು ನೀಡಿ ಸನ್ಮಾನಿಸಿದ್ದರು.

ಈ ಸನ್ಮಾನ ಜಿಲ್ಲೆಯಾದ್ಯಂತ ಭಾರೀ ಚರ್ಚೆಗೆ ಕಾರಣವಾಗಿದೆ. ಡಿಕೆಶಿಗೆ ಬೆಳ್ಳಿ ಕತ್ತಿ ನೀಡುವ ಬದಲು ದೈವಗಳಿಗೆ ಹರಕೆಯಾಗಿ ನೀಡುವ ಕಡ್ಸಲೆಯನ್ನು ನೀಡಲಾಗಿತ್ತು. ದೈವ ಪಾತ್ರಿ, ಭೂತಾರಾಧನೆ ಸಂದರ್ಭ ದೈವ ನರ್ತಕರು ಮಾತ್ರ ಕಡ್ಸಲೆ ಹಿಡಿದುಕೊಳ್ಳಲಾಗುತ್ತದೆ. ಧಾರ್ಮಿಕವಾಗಿ ಬಹಳ ಪವಿತ್ರವಾಗಿರುವ ಕಡ್ಸಲೆಯನ್ನು ಉಡುಗೊರೆಯಾಗಿ ನೀಡಿದ್ದು ಸರಿಯಲ್ಲ ಎಂದು ತುಳುನಾಡಿನ ಹಲವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ದೈವಾರಾಧಕ ಸುದೀಪ್ ಪೂಜಾರಿಯವರು, ಕಡ್ಸಲೆ ಅಂದ್ರೆ ಭಯ ಭಕ್ತಿಯ ಸಂಕೇತ. ದೈವ ದೇವರ ಮೂರ್ತಿಯ ಬದಲು ಕಡ್ಸಲೆಗೆ ಕೈಮುಗಿದು ಪೂಜೆ ಪರ್ವ ಸಲ್ಲಿಸಲಾಗುತ್ತದೆ. ಕರಾವಳಿಯ ಸಂಸ್ಕೃತಿ ಗೊತ್ತಿದ್ದವರೇ ಈ ರೀತಿ ಮಾಡುವುದು ಮೂರ್ಖ ತನ ಎಂದಿದ್ದಾರೆ.

ತುಳುನಾಡಿನ ದೈವಾರಾಧನೆಯು ಬಹು ಹಿಂದಿನ ಕಾಲದಿಂದಲೂ ಕಟ್ಟು ಕಟ್ಟಲೆಗಳನ್ನೊಳಗೊಂಡು ನಡೆದು ಬರುತ್ತಿರುವ ಧಾರ್ಮಿಕ ಆಚರಣೆ. ಇದರಲ್ಲಿ ದೈವಗಳು ನುಡಿ ಕೊಡುವ ಖಡ್ಸಲೆ (ದೈವದ ಖಡ್ಗ) ಇದಕ್ಕೆ ಅದರದೇ ಆದ ವಿಶಿಷ್ಟ ಪ್ರಾದಾನ್ಯತೆ ಇದೆ. ದೈವಾರಾಧನೆಗೆ ಒಂದು ಶಕ್ತಿ ಇದೆ. ಆ ಖಡ್ಸಲೆಯಲ್ಲಿ ಕೊಡುವ ನುಡಿಯನ್ನು ಇಡೀ ತುಳುನಾಡು ಪಾಲನೆ ಮಾಡಿಕೊಂಡು ಬರುತ್ತಿದೆ.

ಇಚಿತಹ ಪ್ರಾಮುಖ್ಯತೆ ಹೊಂದಿರುವ ಖಡ್ಸಲೆಯನ್ನು ಒಂದು ರಾಜಕೀಯ ವೇದಿಕೆಯಲ್ಲಿ ರಾಜಕೀಯ ಮುಖಂಡರಿಗೆ ಸ್ಮರಣಿಕೆಯಾಗಿ ಕೊಟ್ಟಿರುವುದು ಕಾಂಗ್ರೆಸ್ ಪಕ್ಷದ ದಿವಾಳಿತನ, ಕಾಂಗ್ರೆಸ್ ಪಕ್ಷ ಇಡೀ ತುಳುನಾಡಿಗೆ ಅಪಮಾನ ಮಾಡಿದೆ. ಸ್ಮರಣಿಕೆ ನೀಡಲು ಬೇಕಾದಷ್ಟು ಬೇರೆ ಬೇರೆ ಅವಕಾಶ ಇದ್ದರೂ ಸಹ ಕಾಂಗ್ರೆಸ್ ಮುಖಂಡರು ದೈವಾರಾಧನೆಯ ಖಡ್ಸಲೆ ನೀಡಿರುವುದು ಖಂಡನೀಯ ಎಂದಿದ್ದಾರೆ.

ಕಾಂಗ್ರೆಸ್ ಈ ತರಹ ತುಳುನಾಡಿಗೆ ಅವಮಾನ ಮಾಡುತ್ತಿರುವುದು ಹೊಸತೇನಲ್ಲ. ಇಂತಹ ಅನೇಕ ನಡವಳಿಕೆಯಲ್ಲಿ ಬೇರೆ ಬೇರೆ ಸಮಯಗಳಲ್ಲಿ ಅವಮಾನ ಮಾಡುತ್ತಾ ಬಂದಿದೆ. ಇನ್ನಾದರೂ ಕಾಂಗ್ರೆಸ್ ಇಂತಹ ಬುದ್ಧಿಯನ್ನು ಬಿಡಬೇಕು ಎಂದು ಕಾರ್ಕಳ ಶಾಸಕರಾದ ವಿ. ಸುನಿಲ್ ಕುಮಾರ್ ತಿಳಿಸಿದ್ದಾರೆ.

ಕಡ್ಸಲೆಯನ್ನು ಇತರರು ಅಗತ್ಯ ಸಂದರ್ಭದಲ್ಲಿ ಹಿಡಿಕೆಗೆ ಕೈಹಾಕದೆ ಕಡ್ಸಲೆಯ ಕೆಳಭಾಗ ಮತ್ತು ಅಲಗನ್ನು ಎರಡೂ ಕೈಗಳಲ್ಲಿ ಹಿಡಿದು ಕಡ್ಸಲೆಯನ್ನು ದೈವಕ್ಕೆ ಒಪ್ಪಿಸಬೇಕಾದುದು ಪದ್ಧತಿ ಆದರೆ ಅದನ್ನು ವೇದಿಕೆಯಲ್ಲಿ ಈ ರೀತಿ ಮಾಡುವುದು ಎಷ್ಟು ಸರಿ ಎಂಬುದನ್ನು ತುಳುವರು ಯೋಚಿಸಬೇಕಿದೆ.

ದೈವಾರಾಧನೆ ದಕ್ಷಿಣ ಕನ್ನಡ ಮತ್ತು ಉಡುಪಿಯಲ್ಲಿ ವ್ಯತ್ಯಾಸ ಇದ್ದರೂ ದೈವದ ಕಡ್ಸಲೆಯನ್ನು ಎಲ್ಲರೂ ಮುಟ್ಟುವಂತಹ ಅವಕಾಶ ಇರುವುದಿಲ್ಲ ಎನ್ನುವುದು ಗಮನಾರ್ಹ. ಅಷ್ಟೇ ಅಲ್ಲದೆ ಕೋಲ-ನೇಮಗಳ ನಡುವೆ ಆಯುಧ ಬದಲಾಯಿಸುವ ಅಥವಾ ಹಿಂದಕ್ಕೆ ನೀಡುವ ಅಗತ್ಯ ಬಿದ್ದಾಗಲೂ ಕಡ್ಸಲೆಯನ್ನು ನಿಗದಿತ ವ್ಯಕ್ತಿಗಳೇ ಸ್ವೀಕರಿಸುವುದು ಪದ್ಧತಿ.



# ಪತಿ ರಾಮಕೃಷ್ಣನಿಗೆ ಇದ್ದ ಅಕ್ರಮ ಸಂಬಂಧವೇ ವಿಶಾಲ ಗಾಣಿಗ ಹತ್ಯೆಗೆ ಕಾರಣ

## ಈ ಕೊಲೆಗೆ 6 ತಿಂಗಳ ಹಿಂದೆ ದುಬೈನಲ್ಲೇ ಕುಳಿತು ಪ್ಲಾನ್ ರೂಪಿಸಿದ್ದ ರಾಮಕೃಷ್ಣ

ವಿಶಾಲ ಗಾಣಿಗ ಹತ್ಯೆಗೆ ಪತಿ ರಾಮಕೃಷ್ಣನಿಗೆ ಇದ್ದ ಅಕ್ರಮ ಸಂಬಂಧವೇ ಕಾರಣ ಎಂದು ಹೇಳಲಾಗಿದೆ. ರಾಮಕೃಷ್ಣನ ಅಕ್ರಮ ಸಂಬಂಧದಿಂದ ಗಂಡ ಹೆಂಡತಿ ಮಧ್ಯೆ ಆಗಾಗ ಜಗಳ ಕೂಡ ನಡೆಯುತ್ತಿತ್ತು. ಅಲ್ಲದೇ ಆಸ್ತಿ ವಿಚಾರದಲ್ಲೂ ಗಲಾಟೆ ಆಗುತ್ತಲೇ ಇತ್ತು. ಇದೇ ದ್ವೇಷದಿಂದ ರಾಮಕೃಷ್ಣ ಪತ್ನಿಯನ್ನು ಕೊಲೆ ಮಾಡಿಸಿದ್ದಾನೆ. ಪೊಲೀಸರು ರಾಮಕೃಷ್ಣ ಮತ್ತು ಸುಪಾರಿ ಹಂತಕ ಸ್ವಾಮಿ ನಾಥ್ ಎಂಬುವವನನ್ನು ಬಂಧಿಸಿದ್ದಾರೆ. ಇನ್ನೊಬ್ಬ ಆರೋಪಿಗಾಗಿ ಶೋಧಕಾರ್ಯ ಮಾಡುತ್ತಿದ್ದಾರೆ.



ಉಡುಪಿ ಜಿಲ್ಲೆಯ ಗಂಗೊಳ್ಳಿ ಮೂಲದ ವಿಶಾಲ ಗಾಣಿಗ 6 ವರ್ಷದ ಆರ್ವಿ ಜೊತೆಗೆ ಜೂನ್ 6 ರಂದು ದುಬೈನಿಂದ ತವರಿಗೆ ಬಂದಿದ್ದರು. ಪತಿ ರಾಮಕೃಷ್ಣ ದುಬೈನಲ್ಲಿ ಕಂಪನಿಯೊಂದರಲ್ಲಿ ಆಪ್ತ ಸಹಾಯಕನಾಗಿ ಕೆಲಸ ಮಾಡುತ್ತಿದ್ದು, ಕೋಟ್ಯಾಂತರ ಆಸ್ತಿಯನ್ನು ವಿಶಾಲ ಗಾಣಿಗ ಹೊಂದಿದ್ದರು. ಗಂಡ ಮತ್ತು ಮಗಳ ಜೊತೆಯೇ ಸುಂದರ ಸಂಸಾರ ಮಾಡುತ್ತಿದ್ದ ವಿಶಾಲ ಗಾಣಿಗ ಆಸ್ತಿ ಪತ್ರ ವಿಚಾರಕ್ಕೆ ಸಂಬಂಧಿಸಿದಂತೆ ತವರಿಗೆ ಬಂದು, ಉಡುಪಿಯ ಬ್ರಹ್ಮಾವರದಲ್ಲಿರುವ ಸ್ವಂತ ಅಪಾರ್ಟ್‌ಮೆಂಟ್‌ನಲ್ಲಿ ತಂದೆ-ತಾಯಿಯ ಜೊತೆಗಿದ್ದರು. ಜುಲೈ 12ರಂದು ಮಗಳ ಬರ್ತ್ ಡೇ ಹಿನ್ನಲೆಯಲ್ಲಿ ತಂದೆ-ತಾಯಿಯ ಮನೆಯಾದ ಕುಂದಾಪುರದ ಗುಜ್ಜಾಡಿಗೆ ನಾಲ್ವರೂ ಹೋಗಿದ್ದರು. ಆದರೆ ಬ್ಯಾಂಕ್ ಹೋಗುವ ಕಾರಣದಿಂದ ಗುಜ್ಜಾಡಿಯಿಂದ ಮತ್ತೆ ಬ್ರಹ್ಮಾವರಕ್ಕೆ ವಿಶಾಲ ಗಾಣಿಗ ಆಟೋ ದಲ್ಲಿ ಬಂದಿದ್ದರು. ಹೀಗೆ ಬಂದವರು ಬ್ಯಾಂಕ್ ಗೂ ಹೋಗದೇ ಮನೆಯವರ ಸಂಪರ್ಕಕ್ಕೂ ಸಿಗದೇ ಇದ್ದಾಗ, ವಿಶಾಲ ಗಾಣಿಗ ತಂದೆ ಮಗಳ ಫ್ಲ್ಯಾಟ್ ಗೆ ಬಂದು ನೋಡಿದಾಗ ಬೆಡ್ ರೂಂ ನಲ್ಲಿ ವಿಶಾಲ ಗಾಣಿಗ ಶವ ಪತ್ತೆಯಾಗಿತ್ತು.



ಮನುಷ್ಯನಿಗೆ ಹಣದ ದುರಾಸೆ, ಕಾಮದ ವಾಂಚೆ ಅತಿಯಾದರೆ ಏನು ಮಾಡುತ್ತಾನೆ ಎನ್ನುವುದಕ್ಕೆ ರಾಮಕೃಷ್ಣ ಮಾಡಿದ ನೀಚತನದ ಕೃತ್ಯವೇ ಸಾಕ್ಷಿ. ಮನೆಯಲ್ಲಿ ಮುದ್ದಿನ ಹೆಂಡತಿ, ಕುತುಂಡರೂ ಮುಗಿಯದಷ್ಟು ಆಸ್ತಿ ಇದ್ದರೂ ರಾಮಕೃಷ್ಣನ ಪರಸ್ತ್ರಿ ಮೋಹ ಅಮಾಯಕಿ ವಿಶಾಲ ಗಾಣಿಗಳ ಹತ್ಯೆಗೆ ಕಾರಣವಾಗಿದೆ ಎನ್ನಲಾಗಿದೆ.

ತಾಳಿ ಕಟ್ಟಿದ ಪತ್ನಿಯನ್ನೇ ಹತ್ಯೆ ಮಾಡಿಸಿ, ತನ್ನದೇ ಪುಟ್ಟ ಕಂದಮ್ಮನನ್ನು ತಾಯಿ ಇಲ್ಲದ ತಬ್ಬಲಿ ಮಾಡಿ ಬಿಟ್ಟ ರಾಮಕೃಷ್ಣನನ್ನು ಉಡುಪಿ ಪೊಲೀಸರು ಬಂಧಿಸಿದ್ದಾರೆ.

ಜುಲೈ 12ರಂದು ವಿಶಾಲ ಗಾಣಿಗ ಹತ್ಯೆ ನಡೆದಿತ್ತು. ಆತನ ಎಲ್ಲಾ ಪ್ಲಾನ್‌ಗಳು ಸಕ್ಸಸ್ ಆಗಿದ್ದರೆ ಇಷ್ಟು ಹೊತ್ತಿಗೆ ಎಲ್ಲರ ಸಿಂಪತಿಗಳಿಸುತ್ತಿದ್ದ. ಕೋಟ್ಯಾಂತರ ರೂಪಾಯಿ ಆಸ್ತಿಯ ಒಡೆಯನಾಗುತ್ತಿದ್ದ. ಹೆಂಡತಿ ಸತ್ತ ದುಃಖದಲ್ಲಿ ಮತ್ತೊಂದು ಮದುವೆಯಾಗಿ ಬಿಂದಾಸ್ ಜೀವನ ನಡೆಸುತ್ತಿದ್ದ. ಆದರೆ ವಿಧಿ ಅವನ ಪ್ಲಾನ್ ಉಲ್ಟಾಮಾಡಿ ಕಹಿಸತ್ಯವನ್ನು ಜಗತ್ತಿಗೆ ತೆರೆದಿಟ್ಟಿದೆ.

ಉಡುಪಿಯ ವಿಶಾಲ ಗಾಣಿಗ ಕೊಲೆ ಪ್ರಕರಣದ ಸೂತ್ರಧಾರಿ, ವಿಶಾಲ ಗಾಣಿಗ ಪತಿ ರಾಮಕೃಷ್ಣ ಮಾಡಿದ ಹತ್ಯೆ ಪ್ಲಾನ್ ಹೀಗಿದೆ ನೋಡಿ.

2 ಲಕ್ಷ ರೂಪಾಯಿ ಸುಪಾರಿ ವಿಶಾಲ ಗಾಣಿಗ ಪತಿ ರಾಮಕೃಷ್ಣ ಈ ಕೊಲೆಗೆ 6 ತಿಂಗಳ ಹಿಂದೆ ದುಬೈನಲ್ಲೇ ಕುಳಿತು ಪ್ಲಾನ್ ರೂಪಿಸಿದ್ದ. ಹಂತಕರಿಗೆ 2 ಲಕ್ಷಕ್ಕೂ ಅಧಿಕ ಹಣ ನೀಡಿ ಸುಪಾರಿ ಕೊಟ್ಟಿದ್ದ. ಕಳೆದ ಮಾರ್ಚ್ ತಿಂಗಳಲ್ಲಿ ಊರಿಗೆ ಬಂದಾಗ ವಿಶಾಲ ಗಾಣಿಗಗೆ ಇದು ನನ್ನ ಫ್ರೆಂಡ್ಸ್ ಅಂತ ಹಂತಕರನ್ನು ಪರಿಚಯ ಕೂಡ ಮಾಡಿಸಿದ್ದ. ಹೆಂಡತಿಯನ್ನು ವ್ಯವಸಿತವಾಗಿ ಮುಗಿಸಬೇಕೆಂದು ಪ್ಲಾನ್ ಮಾಡಿದ ಪತಿ ರಾಮಕೃಷ್ಣ ಕೊಲೆಯ ದಿನ ಹೆಂಡತಿಗೆ ತನ್ನ ಪ್ಲಾನ್ ಪ್ರಕಾರನೇ ಫ್ಲ್ಯಾಟ್ ನಲ್ಲಿ ಒಬ್ಬಳೇ ಇರುವಂತೆ ನೋಡಿಕೊಂಡಿದ್ದಾನೆ. ಈಗ ಫ್ಲ್ಯಾಟ್‌ಗೆ ಸ್ನೇಹಿತರಿಬ್ಬರು ಬರ್ತಾರೆ. ಅವರಿಗೆ ಪಾರ್ಸೆಲ್ ಕೊಡು ಅಂತಾ ಹೇಳಿದ್ದಾನೆ. ಹೀಗೆ ರಾಮಕೃಷ್ಣ ಕಳುಹಿಸಿದ ಆ ಫ್ರೆಂಡ್ಸ್ ಗಳೇ ಉತ್ತರ ಭಾರತ ಮೂಲದ ಸುಪಾರಿ ಹಂತಕರು.

ಉಡುಪಿ ಜಿಲ್ಲಾ ಎಸ್ಪಿ ವಿಷ್ಣುವರ್ಧನ್ ನೇತೃತ್ವದಲ್ಲಿ 4 ತಂಡಗಳಾಗಿ ಎಲ್ಲಾ ಆಯಾಮಗಳಲ್ಲಿ ತನಿಖೆ ಶುರು ಮಾಡಿದ ಪೊಲೀಸರು ಮೊದಲು ಚಿನ್ನ, ಹಣದ ದರೋಡೆ ಉದ್ದೇಶದಿಂದ



ಕೊಲೆ ಮಾಡಿದ್ದು ಎಂದು ಸಂಶಯ ಇದ್ದರೂ ನಂತರ, ತನಿಖೆಯ ವೇಳೆ ಇದು ಕೌಟುಂಬಿಕ ಕಾರಣಕ್ಕಾಗಿ ನಡೆದ ಹತ್ಯೆ ಅನ್ನುವುದನ್ನು ಕಂಡುಕೊಂಡರು. ಉಡುಪಿ ಪೊಲೀಸರಿಗೆ ಸಿಕ್ಕಿದ ಬಲವಾದ ಸುಳಿವಿನ ಆಧಾರದಲ್ಲಿ, ಸುಪಾರಿ ಹಂತಕ ಸ್ವಾಮಿನಾಥ್ ಎಂಬುವವನ್ನು ಉತ್ತರ ಪ್ರದೇಶದ ಗೋರಖ್ಪುರ್‌ನಲ್ಲಿ ಬಂಧಿಸಿದ ಪೊಲೀಸರು, ವಿಚಾರಣೆ ವೇಳೆ ಒಂದು ಕ್ಷಣ ಬೆಚ್ಚಿ ಬಿದ್ದಿದ್ದಾರೆ



ಒಂದೂ ಸುಳಿವು ಬಿಡದೇ ಫ್ಲ್ಯಾಟ್‌ನಲ್ಲಿ ಒಂಟಿ ಮಹಿಳೆಯ ಹತ್ಯೆ ಕರಾವಳಿಯಲ್ಲಿ ಸಂಚಲನ ಮೂಡಿಸಿತ್ತು. ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ಹಲವು ಮಂದಿಯನ್ನು ತೀವ್ರ ವಿಚಾರಣೆಯನ್ನೂ ಮಾಡಿದ್ದರು. ಆದರೆ ಕೊಲೆ ಆರೋಪಿಗಳು ಯಾವುದೇ ಸುಳಿವನ್ನು ಬಿಟ್ಟಿರಲಿಲ್ಲ. ವಿಶಾಲ ಗಾಣಿಗರನ್ನು ಕೇಬಲ್‌ನಲ್ಲಿ ಕತ್ತು ಬಿಗಿದು ಹತ್ಯೆ ಮಾಡಲಾಗಿತ್ತು. ಮೈ ಮೇಲಿದ್ದ ಚಿನ್ನವನ್ನು ಹಂತಕರು ದೋಚಿದ್ದರು. ಆದರೆ ಬೀರುನಲ್ಲಿದ್ದ ಚಿನ್ನಾಭರಣ ಹಾಗೆಯೇ ಇತ್ತು. ಮನೆಯ ಅಡುಗೆ ಕೋಣೆಯಲ್ಲಿ ಚಹಾದ ಲೋಟವೂ ಅರ್ಧ ತೊಳೆದ ಸ್ಥಿತಿಯಲ್ಲಿತ್ತು. ಹೀಗಾಗಿ ಇದು ಪರಿಚಯಸ್ಥರ ಕೆಲಸವೇ ಅಂದುಕೊಂಡ ಪೊಲೀಸರು ತನಿಖೆಯನ್ನು ಮತ್ತಷ್ಟು ಚುರುಕುಗೊಳಿಸಿದರು. ಉಡುಪಿ ಪೊಲೀಸ್ ವರಿಷ್ಠಾಧಿಕಾರಿ ವಿಷ್ಣುವರ್ಧನ್ ನೇತೃತ್ವದ ನಾಲ್ಕು ಪೊಲೀಸ್ ತಂಡ ಪ್ರಕರಣದ ತನಿಖೆ ಕೈಗೊಂಡಿತ್ತು.

ಕೊಲೆಗೆ ಡೀಲ್ ಕುದುರಿಸಿದ ಓರ್ವ ಆರೋಪಿ ಮತ್ತು ಕೊಲೆಗೈದಿರುವ ಇನ್ನೋರ್ವ ಆರೋಪಿಯ ಬಂಧನ ಇನ್ನಷ್ಟೇ ಆಗಬೇಕಾಗಿದೆ. ಪೊಲೀಸ್ ಕಸ್ಟಡಿಯಲ್ಲಿರುವ ಆರೋಪಿಗಳ ತೀವ್ರ ವಿಚಾರಣೆ ನಡೆಯುತ್ತಿದೆ. ಪ್ರಕರಣ ಸಂಬಂಧ ಪೊಲೀಸರಿಗೆ ಆರಂಭಿಕ ಹಂತದಲ್ಲಿ ಯಾವುದೇ ಸಾಕ್ಷ್ಯಗಳು ಲಭ್ಯವಾಗಿರಲಿಲ್ಲ. ಪಡುಬಿದ್ರೆಯಿಂದ ಬೈಂದೂರುವರೆಗೆ ನೂರಾರು ಕಿಲೋಮೀಟರ ಸಿಸಿಟಿವಿ ಜಾಲಾಡಿದ್ದರು. ವಿಮಾನ ನಿಲ್ದಾಣ ರೈಲು ನಿಲ್ದಾಣದಲ್ಲಿ ಪೊಲೀಸರು ಮಾಹಿತಿ ಕಲೆಹಾಕಲು ಶ್ರಮಿಸಿದ್ದರು. ಪ್ರಕರಣ ತನಿಖೆ ಮಾಡಿದ ಪೊಲೀಸರ ನಾಲ್ಕು ತಂಡಗಳಿಗೆ ಪೊಲೀಸರಿಗೆ ಎಸ್ಪಿ ವಿಷ್ಣುವರ್ಧನ್ ಧನ್ಯವಾದ ಹೇಳಿದ್ದಾರೆ. ರಾಜ್ಯದ ಗಮನ ಸೆಳೆದಿದ್ದ ಜಟಿಲ ಪ್ರಕರಣವನ್ನು ಬೇಧಿಸಿರುವ ಸಹೋದ್ಯೋಗಿಗಳಿಗೆ ಡಿಜಿಪಿ ಪ್ರವೀಣ್ ಸೂದ್ 50



ಸಾವಿರ ರುಪಾಯಿ ಬಹುಮಾನ ನೀಡಿದ್ದಾರೆ.

ಕಾರ್ಯಾಚರಣೆಯಲ್ಲಿ ಅನಂತ ಪದ್ಮನಾಭ, ಸಿ.ಪಿ.ಐ., ಬ್ರಹ್ಮಾವರ, ಮಂಜುನಾಥ ಪಿ.ಐ. ಮಣಿಪಾಲ, ಶರಣಗೌಡ, ಸಿಪಿಐ, ಮಲ್ಪೆ ವೃತ್ತ, ಪ್ರಮೋದ್ ಪಿ.ಐ, ಉಡುಪಿ ನಗರ ಠಾಣೆ, ಸಂಪತ್ ಕುಮಾರ್ ಎ, ಸಿಪಿಐ ಕಾರ್ಕಳ, ಗುರುನಾಥ ಬಿ ಹಾದಿಮನಿ, ಪಿ.ಎಸ್.ಐ ಬ್ರಹ್ಮಾವರ, ಮಧು ಪಿ.ಎಸ್.ಐ ಕಾರ್ಕಳ ನಗರ, ರಾಘವೇಂದ್ರ ಪಿ.ಎಸ್.ಐ ಕಾಪು, ಶ್ರೀಧರ ನಾಯ್ಕ, ಪಿ.ಎಸ್.ಐ, ಶಂಕರನಾರಾಯಣ ಠಾಣೆ, ಕೆ.ಆರ್ ಸುನಿತಾ,.ಪಿ.ಎಸ್.ಐ ಬ್ರಹ್ಮಾವರ, ಸಂತೋಷ ಬಿ.ಪಿ, ಪಿ.ಎಸ್.ಐ ಕೋಟ, ಕೃಷ್ಣಪ್ಪ ಎ.ಎಸ್.ಐ, ಬ್ರಹ್ಮಾವರ ವೃತ್ತ ಕಛೇರಿ, ಎ.ಎಸ್.ಐ ರವರಾದ ಶ್ರೀ ಗೋಪಾಲ ಪೂಜಾರಿ, ನಾರಾಯಣ ಕೆ.ಎಸ್. ಸುಂದರ, ಬ್ರಹ್ಮಾವರ ಠಾಣೆ ಹಾಗೂ ಸಿಬ್ಬಂದಿಯವರಾದ ಚಂದ್ರ ಶೆಟ್ಟಿ, ವೆಂಕಟರಮಣ ದೇವಾಡಿಗ, ಪ್ರವೀಣ ಶೆಟ್ಟಿಗಾರ್, ಪ್ರದೀಪ್ನಾಯಕ, ಸತೀಶ, ವಾಸುದೇವ ಪೂಜಾರಿ, ಅಶೋಕ ಮೆಂಡನ್, ರಾಘವೇಂದ್ರ, ಸಂತೋಷ ಶೆಟ್ಟಿ, ಗಣೇಶ ದೇವಾಡಿಗ, ಸಬಿತಾ, ಜ್ಯೋತಿ ಎಂ, ಶಾಂಭವಿ, ಮೊಹಮ್ಮದ್ ಅಲ್, ದಿಲೀಪ್ ಕುಮಾರ್, ರವೀಂದ್ರ ಹೆಚ್, ಪ್ರಕಾಶ, ಬಶೀರ್, ಸಂದೀಪ್.ಕೆ, ವಿಕ್ರಂ, ನೇತ್ರಾವತಿ, ಅಪೂರ್ವ, ಜಿಲ್ಲಾ ಪೊಲೀಸ್ ಕಛೇರಿಯ ತಾಂತ್ರಿಕ ತಂಡದ ಸಿಬ್ಬಂದಿಗಳಾದ ಶಿವಾನಂದ, ದಿನೇಶ, ನಿತಿನ್ ಹಾಗೂ ಚಾಲಕರಾದ ಶೇಖರ್, ಸಂತೋಷ ಪೂಜಾರಿ ಮತ್ತು ಅಣ್ಣಪ್ಪ ಅವರ ಕೊಲೆ ಪ್ರಕರಣವನ್ನು ಭೇಧಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ.

# ಕಟೀಲು ದುರ್ಗೆ ಬಗ್ಗೆ ಅಶ್ಲೀಲ ಪದ ಬಳಸಿದ ವ್ಯಕ್ತಿ ದೇವಳಕ್ಕೆ ಬಂದು ಕ್ಷಮೆ ಯಾಚನೆ

## ಮುಂಬೈನಲ್ಲಿ ಉದ್ಯೋಗದಲ್ಲಿರುವ 80 ವರ್ಷ ಪ್ರಾಯದ ಬಜ್ಪೆ ನಿವಾಸಿ

ಮುಂಬೈನಲ್ಲಿ ಉದ್ಯೋಗದಲ್ಲಿರುವ 80 ವರ್ಷ ಪ್ರಾಯದ ವ್ಯಕ್ತಿಯೊಬ್ಬ ಸಾಮಾಜಿಕ ಜಾಲತಾಣದಲ್ಲಿ ಕಟೀಲು ದುರ್ಗೆ ಬಗ್ಗೆ ಅವಹೇಳನ ಮಾಡಿ ಸಂದೇಶ ರವಾನಿಸಿ ಪಶ್ಚಾತಾಪ ಗೊಂಡು ಶ್ರೀ ಕ್ಷೇತ್ರಕ್ಕೆ ಬಂದು ತಪ್ಪೊಪ್ಪಿಕೊಂಡ ಘಟನೆ ನಡೆದಿದೆ.

ಬಜ್ಪೆ ನಿವಾಸಿ, ಮುಂಬೈನಲ್ಲಿ ಉದ್ಯೋಗದಲ್ಲಿರುವ 80 ವರ್ಷ ಪ್ರಾಯದ ಅಲ್ಬರ್ಟ್ ಫರ್ನಾಂಡಿಸ್ ಎಂಬುವರು ಕಟೀಲು ಶ್ರೀ ದುರ್ಗಾಪರಮೇಶ್ವರಿ ದೇವಿ ಬಗ್ಗೆ ಅಶ್ಲೀಲ ಪದ ಬಳಸಿ ದಿನೇಶ್ ಎಂಬುವರಿಗೆ ವಾಯ್ಸ್ ಮೆಸೇಜ್ ಕಳುಹಿಸಿದ್ದು, ಈ ಬಗ್ಗೆ ದಿನೇಶ್ ಬಜ್ಪೆ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದರು.



ಅಲ್ಬರ್ಟ್ ಅವರಿಗೆ ತಮ್ಮ ತಪ್ಪಿನ ಅರಿವಾಗಿ ಕಟೀಲು ಶ್ರೀ ದುರ್ಗಾಪರಮೇಶ್ವರಿ ದೇವಳಕ್ಕೆ ಬಂದು ಕ್ಷೇತ್ರದ ಅರ್ಚಕ ಕೆ.ಲಕ್ಷ್ಮೀನಾರಾಯಣ ಆಸ್ರಣ್ಣರ ಉಪಸ್ಥಿತಿಯಲ್ಲಿ ದೇವಿ ಸನ್ನಿಧಿಯಲ್ಲಿ ತಾನು ದೇವಿಯ ಬಗ್ಗೆ ಅಶ್ಲೀಲ ಸಂದೇಶ ಕಳುಹಿಸಿದ್ದು, ತಾನು ಮಾಡಿದ ತಪ್ಪೆಂದು ಹೇಳಿ ಕ್ಷಮೆ ಯಾಚಿಸಿದ್ದಾರೆ.

ಬಳಿಕ ಬಜ್ಪೆ ಪೊಲೀಸ್ ಠಾಣೆಗೆ ಬಂದು, ತನ್ನ ತಪ್ಪಿನ ಅರಿವಾಗಿದ್ದು, ಪಶ್ಚಾತಾಪ ಪಟ್ಟಿದ್ದೇನೆ. ಮಾನಸಿಕವಾಗಿ ನೊಂದುಕೊಂಡಿರುವ ತನ್ನನ್ನು ಬಂಧಿಸಿದರೆ ಬದುಕುಳಿಯುವುದಿಲ್ಲ ಎಂದು ಅಲ್ಬರ್ಟ್ ಫರ್ನಾಂಡಿಸ್ ಅಂಗಲಾಚಿದ್ದಾರೆ. ಅಲ್ಬರ್ಟ್ ಅವರ ವಯಸ್ಸನ್ನು ಗಮನಿಸಿ ದೂರು ನೀಡಿದವರನ್ನು ಠಾಣೆಗೆ ಕರೆಸಿ ದೂರು ಹಿಂಪಡೆದು ಮಾತುಕತೆ ಮೂಲಕ ಪ್ರಕರಣ ಇತ್ಯರ್ಥಗೊಳಿಸಲಾಗಿದೆ.

# ಲಂಚ ಪಡೆದ ಮಂಗಳೂರು ವಿಶ್ವ ವಿದ್ಯಾನಿಲಯದ ಪ್ರೊಫೆಸರ್‌ಗೆ ಐದು ವರ್ಷ ಶಿಕ್ಷೆ

ಕೊಣಾಜೆಯ ಮಂಗಳೂರು ವಿಶ್ವ ವಿದ್ಯಾನಿಲಯದ ಸಮಾಜ ಶಾಸ್ತ್ರದ ಸಹಾಯಕ ಪ್ರೊಫೆಸರ್ ಡಾ. ಅನಿತಾ ರವಿಶಂಕರ್ ಲಂಚ ಸ್ವೀಕಾರ ಆರೋಪ ಸಾಬೀತಾಗಿದ್ದು ಅವರಿಗೆ ಮೂರನೇ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಹಾಗೂ ಲೋಕಾಯುಕ್ತ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಬಿ. ಬಿ. ಜಕಾತಿ ಅವರು ಐದು ವರ್ಷ ಶಿಕ್ಷೆ ಪ್ರಕಟಿಸಿದ್ದಾರೆ.



ದಿನಾಂಕ 04–12–2012ರಂದು ಪ್ರಕರಣದ ಪಿರ್ಯಾದಿ ಪಿ.ಹೆಚ್.ಡಿ. ವಿದ್ಯಾರ್ಥಿನಿ ಪ್ರೇಮ ಡಿ'ಸೋಜ ಎಂಬವರಿಂದ ಅವರ ಪ್ರಭಂದ ಅಂಗೀಕಾರ ಆಗಬೇಕಾದರೆ ಮೈಸೂರಿನಿಂದ ಬರುವ ಬಾಹ್ಯ ಪರಿವೀಕ್ಷಕರ ಖರ್ಚಿನ ಬಾಬ್ತು ರೂ. 16,800/– ಲಂಚದ ಹಣಕ್ಕೆ ಬೇಡಿಕೆ ಇಟ್ಟು ಮುಂಗಡ ಹಣ ರೂ. 5,000/– ಸ್ವೀಕರಿಸುತ್ತಿದ್ದಾಗ ಮಂಗಳೂರು ಲೋಕಾಯುಕ್ತ ನಿರೀಕ್ಷಕರಾದ ಉಮೇಶ್ ಜಿ. ಶೇಟ್ ಮತ್ತು ಸಿಬ್ಬಂದಿ ದಾಳಿ ಮಾಡಿ ಪ್ರಸ್ತುತ ಕೊಣಾಜೆ ಮಂಗಳೂರು ಯುನಿವರ್ಸಿಟಿಯ ಸಮಾಜ ಶಾಸ್ತ್ರದ ಸಹಾಯಕ ಪ್ರೊಫೆಸರ್ ಆಗಿರುವ ಡಾ. ಅನಿತಾ ರವಿಶಂಕರ್ ರವರನ್ನು ಬಂದಿಸಿದ್ದರು. ಸದ್ರಿ ಆರೋಪಿ ಮೊದಲು ರೂ. 10,000/–, ನಂತರ ರೂ 4,000/– ಮತ್ತು ತದನಂತರ ರೂ. 16,800/– ಕ್ಕೆ ಪಿರ್ಯಾದಿಯ ಬಳಿ ಬೇಡಿಕೆ ಇಟ್ಟಿದ್ದಳು ಎಂದು ಆರೋಪಿಸಲಾಗಿತ್ತು. ಲೋಕಾಯುಕ್ತ ಸಂಸ್ಥೆಯ ಪರವಾಗಿ ಒಟ್ಟು 9 ಸಾಕ್ಷಿದಾರರನ್ನು ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆಗೆ ಒಳ ಪಡಿಸಲಾಗಿತ್ತು. ವಿಚಾರಣೆ ನಡೆಸಿದ ಮಂಗಳೂರು ಲೋಕಾಯುಕ್ತ ವಿಶೇಷ ನ್ಯಾಯಾಲಯವು ವಿಶೇಷ ಸರಕಾರಿ ಅಭಿಯೋಜಕ ಕೆ. ಎಸ್. ಎನ್. ರಾಜೇಶ್ ರವರ ವಾದವನ್ನು ಪುರಸ್ಕರಿಸಿ, ಆರೋಪಿಯ ಮೇಲಿನ ಆರೋಪ ಸಾಬೀತಾಗಿದೆ ಎಂದು ತೀರ್ಮಾನಕ್ಕೆ ಬಂದ ಹಿನ್ನಲೆಯಲ್ಲಿ ಆರೋಪಿಗೆ ಶಿಕ್ಷೆ ವಿಧಿಸಿದೆ. ಮೂರನೇ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಹಾಗೂ ಲೋಕಾಯುಕ್ತ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಬಿ. ಬಿ. ಜಕಾತಿ ಅವರು ಶಿಕ್ಷೆ ಪ್ರಕಟಿಸಿದ್ದಾರೆ.

ಭ್ರಷ್ಟಾಚಾರ ನಿಗ್ರಹ ಖಾಯಿದೆಯ ಕಲಂ 7 ರ ಅಡಿ ಯಲ್ಲಿ ಎಸಗಿದ ಅಪರಾಧಕ್ಕೆ ಆರೋಪಿಗೆ 2 ವರ್ಷ ಸಾದಾ ಸಜೆ ಮತ್ತು ರೂ. 15,000/– ದಂಡ. ಕಲಂ 13 (1) (ಡಿ) ಯಲ್ಲಿ ಎಸಗಿದ ಅಪರಾಧಕ್ಕೆ 3 ವರ್ಷ ಸಾದಾ ಸಜೆ ಮತ್ತು ರೂ. 15,000/– ದಂಡ.ಆರೋಪಿ ದಂಡ ತೆರಲು ತಪ್ಪಿದ್ದಲ್ಲಿ ತಲಾ ಒಂದು ತಿಂಗಳುಗಳ ಸಾದಾ ಸಜೆ ಅನುಭವಿಸಬೇಕೆಂದು ದಿನಾಂಕ 09–07–2021 ರಂದು ನ್ಯಾಯಾಲಯ ಆದೇಶಿಸಿದೆ. ಆದರೆ ಎರಡೂ ಅಪರಾಧಕ್ಕೆ ಸಂಬಂದಿಸಿದ ಶಿಕ್ಷೆಗಳನ್ನು ಅಪರಾಧಿ ಜೊತೆಯಾಗಿ ಅನುಭವಿಸಬೇಕೆಂದು ನ್ಯಾಯಾಲಯ ಆದೇಶಿಸಿದೆ. ಆಗಿನ ಲೋಕಾಯುಕ್ತ ಇನ್ಸ್‌ಪೆಕ್ಟರ್ ಉಮೇಶ್ ಜಿ. ಶೇಟ್ ತನಿಖೆ ನಡೆಸಿ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು.

ಮಂಗಳೂರು ಲೋಕಾಯುಕ್ತ ಪರವಾಗಿ ವಿಶೇಷ ಸರಕಾರಿ ಅಭಿಯೋಜಕ, ನ್ಯಾಯವಾದಿ ಕೆ.ಎಸ್.ಎನ್. ರಾಜೇಶ್ ವಾದಿಸಿದ್ದರು.

# ಫ್ಲ್ಯಾಟ್ ಮಾಲಕರಿಗೆ 50 ರೂ ಕೊಟ್ಟು ಅವರ ಖಾತೆಯಿಂದ 2,23,500 ರೂ ತೆಗೆದ ಖದೀಮ

ಫ್ಲ್ಯಾಟ್ ಬಾಡಿಗೆಗೆ ಪಡೆಯುವುದಾಗಿ ಹೇಳಿ ಕುಳಾಯಿಯ ವ್ಯಕ್ತಿಯೋರ್ವರ ಖಾತೆಯಿಂದ 2,23,500 ರೂ. ವರ್ಗಾಯಿಸಿ ವಂಚಿಸಿರುವ ಬಗ್ಗೆ ನಗರದ ಸೈಬರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಫ್ಲ್ಯಾಟ್ ಮಾಲಕರೋರ್ವರು ಫ್ಲ್ಯಾಟ್ ಬಾಡಿಗೆಗೆ ನೀಡುವ ಬಗ್ಗೆ ವೆಬ್‌ಸೈಟ್‌ನಲ್ಲಿ ಜಾಹೀರಾತು ಪ್ರಕಟಿಸಿದ್ದರು. ಇದನ್ನು ನೋಡಿದ ವ್ಯಕ್ತಿಯೋರ್ವರು ಜು.20ರಂದು ಕರೆ ಮಾಡಿ ತನ್ನನ್ನು ಅಂಕಿತ್ ವಿಜಯ್ ಎಂದು ಪರಿಚಯಿಸಿ ತಾನು ಸೈನಿಕನಾಗಿದ್ದು, ಅಹಮದಾಬಾದ್‌ನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಮಂಗಳೂರಿಗೆ ವರ್ಗಾವಣೆ ಯಾಗಿರುವುದರಿಂದ ಕುಳಾಯಿಯಲ್ಲಿ ಫ್ಲ್ಯಾಟ್ ಬಾಡಿಗೆಗೆ ಬೇಕು ಎಂದು ತಿಳಿಸಿದ್ದಾನೆ.




ಸೈನಿಕರ ಸಮವಸ್ತ್ರದಲ್ಲಿರುವ ಭಾವಚಿತ್ರ ಹಾಗೂ ಆಧಾರ್ ಕಾರ್ಡ್‌ನ್ನು ವಾಟ್ಸ್ ಅಪ್ ಮೂಲಕ ಫ್ಲ್ಯಾಟ್ ಮಾಲಕರಿಗೆ ಕಳುಹಿಸಿಕೊಟ್ಟು ಫ್ಲ್ಯಾಟ್‌ನ ಭಾವಚಿತ್ರ ಕಳುಹಿಸಿಕೊಡುವಂತೆ ಹೇಳಿದ್ದಾನೆ. ಅದರಂತೆ, ಫ್ಲ್ಯಾಟ್ ಮಾಲಕರು ಫ್ಲ್ಯಾಟ್ ಭಾವಚಿತ್ರವನ್ನು ಕಳುಹಿಸಿಕೊಟ್ಟರು. ನಂತರ ರಾತ್ರಿ ಕರೆ ಮಾಡಿದ ಆ ವ್ಯಕ್ತಿಯು ತನ್ನ ಮನೆಯವರಿಗೆ ಫ್ಲ್ಯಾಟ್ ಇಷ್ಟವಾಗಿದ್ದು ಬಾಡಿಗೆಗೆ ಪಡೆಯುವು ದಾಗಿ ತಿಳಿಸಿದ್ದಾನೆ.

10,000 ರೂ. ಬಾಡಿಗೆ ಹಾಗೂ 25,000 ರೂ. ಡೆಪಾಸಿಟ್ ನೀಡುವುದಾಗಿ ಒಪ್ಪಿದ. ಅಲ್ಲದೆ, ತನ್ನ ಅಕೌಂಟೆಂಟ್ ರಣದೀಪ್ ಸಿಂಗ್ ಹಾಗೂ ಮೇಲಧಿಕಾರಿ ಪ್ರಶಾಂತ್ ಗುಪ್ತಾ ದೆಹಲಿಯಲ್ಲಿದ್ದು, ಅವರು ಹಣ ಪಾವತಿಸಲಿದ್ದಾರೆ ಎಂದು ಹೇಳಿದ್ದು, ಆ ಬಳಿಕ ಫ್ಲ್ಯಾಟ್ ಮಾಲಕರ ಖಾತೆಗೆ ಆರೋಪಿಗಳು 50 ರೂ. ವರ್ಗಾಯಿಸಿದರು. ನಂತರ ಫ್ಲ್ಯಾಟ್ ಮಾಲಕರ ಖಾತೆಯಿಂದಲೇ ಹಂತ ಹಂತವಾಗಿ 2,23,500 ರೂ.ನ್ನು ವರ್ಗಾಯಿಸಿಕೊಂಡು ಮೋಸ ಮಾಡಿದ್ದಾರೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

# ನಿಶ್ಚಿತಾರ್ಥ ಮಾಡಿಕೊಂಡಿದ್ದ ಯುವಕನನ್ನು ಅಪಹರಿಸಿ ಕೊಲೆಗೈದ ಆರೋಪ ಸಾಬೀತು

## ಮದುವೆಯಾಗಿ ಮಕ್ಕಳಿದ್ದರು ಅದೇ ಯುವತಿ ಬೇಕೆಂದು ಹಠ ಹಿಡಿದಿದ್ದ ಮತ್ತೊಬ್ಬನಿಂದ ಕೊಲೆ

ಬೆಳ್ತಂಗಡಿಯಲ್ಲಿ ನಿಶ್ಚಿತಾರ್ಥ ಮಾಡಿಕೊಂಡಿದ್ದ ಯುವಕನನ್ನು ಕಾರಿನಲ್ಲಿ ಅಪಹರಿಸಿ ಕೊಲೆಗೈದ ಪ್ರಕರಣಕ್ಕೆ ಸಂಬಂಧಿಸಿ ಆರೋಪ ಸಾಬೀತಾಗಿದೆ.

ಬೆಳ್ತಂಗಡಿಯ ದಿಡುಪೆ ನಿವಾಸಿ ಸುರೇಶ್ ನಾಯ್ಕ (30) ಕೊಲೆಯಾದವರು. ಬೆಳ್ತಂಗಡಿಯ ನಾವೂರ ನಿವಾಸಿ ಆನಂದ ನಾಯ್ಕ (39), ಬೆಳ್ತಂಗಡಿ ಕಸಬಾ ನಿವಾಸಿ ಪ್ರವೀಣ್ ನಾಯ್ಕ (39), ಚಾರ್ಮಾಡಿ ನಿವಾಸಿ ವಿನಯ ಕುಮಾರ್ (34), ಮೂಡುಕೋಡಿ ನಿವಾಸಿ ಪ್ರಕಾಶ್ (35), ಬಂಟ್ವಾಳ ಪುದು ನಿವಾಸಿ ಲೋಕೇಶ್ (38), ಮೇಲಂತಬೆಟ್ಟು ನಿವಾಸಿ ನಾಗರಾಜ (43) ಪ್ರಕರಣದ ಆರೋಪಿಗಳು.

ನಾವೂರ ಮೂಲದ ಆನಂದ ನಾಯ್ಕ ಎಂಬಾತನಿಗೆ ಮದುವೆಯಾಗಿ ಅದಾಗಲೇ ಮಕ್ಕಳಿದ್ದವು. ಇದರ ಹೊರತಾಗಿಯೂ ಈತ ಪರಿಚಯದ ಯುವತಿಯನ್ನು ಪ್ರೀತಿಸುತ್ತಿದ್ದ. ಆ ಯುವತಿಯನ್ನು ಮದುವೆಯಾಗುವ ಹಠಕ್ಕೆ ಬಿದ್ದು, ಯುವತಿಯ ತಂದೆಯಲ್ಲಿ ವಿಷಯ ಪ್ರಸ್ತಾಪಿಸಿದ್ದ. ಆದರೆ ಯುವತಿ ಮನೆಯವರು ಇದಕ್ಕೆ ವಿರೋಧ ವ್ಯಕ್ತಪಡಿಸಿದ್ದರು.

ಕೆಲವು ದಿನಗಳ ನಂತರ ದಿಡುಪೆ ನಿವಾಸಿ ಸುರೇಶ್ ನಾಯ್ಕ ಜತೆ ಯುವತಿಯ ಮದುವೆ ಸಂಬಂಧ ಕೂಡಿ ಬಂದಿತ್ತು. 2017ರ ಎಪ್ರಿಲ್ 30ರಂದು ನಿಶ್ಚಿತಾರ್ಥಕ್ಕೆ ದಿನ ನಿಗದಿಯಾಗಿತ್ತು. ಈ ವಿಷಯ ಆನಂದ ನಾಯ್ಕ ಗಮನಕ್ಕೆ ಬಂದಿದೆ. ಯುವತಿಯ ಮನೆಯವರಲ್ಲಿ ಸುರೇಶ್ ನಾಯ್ಕನ ಮೊಬೈಲ್ ನಂಬರ್ ಸಂಗ್ರಹಿಸಿ 'ನೀನು ಮದುವೆಯಾಗುವ ಯುವತಿಯನ್ನು ನಾನು ಪ್ರೀತಿಸುತ್ತಿದ್ದು ಈ ಸಂಬಂಧವನ್ನು ಬಿಟ್ಟುಬಿಡು' ಎಂದು ಒತ್ತಾಯಿಸಿದ್ದಾನೆ.

ಇದಕ್ಕೆ ಒಪ್ಪದಿದ್ದಾಗ ಸುರೇಶ್ ನಾಯ್ಕರಿಗೆ ಜೀವ ಬೆದರಿಕೆಯನ್ನೂ ಆರೋಪಿ ಹಾಕಿದ್ದಾನೆ. ನಂತರ 2017 ಜುಲೈ 29ರಂದು ಎರಡನೇ ಆರೋಪಿ ಪ್ರವೀಣ್ ನಾಯ್ಕ ಎಂಬಾತನು ಸುರೇಶ್ ಗೆ ಕರೆ ಮಾಡಿ ಆತ್ಮೀಯವಾಗಿ ಮಾತನಾಡಿ 'ಗಂಗಾ ಕಲ್ಯಾಣ ಯೋಜನೆಯಡಿ ಹಣ ಸಿಗುವ ಬಗ್ಗೆ ಮಾಹಿತಿ ನೀಡಿದ್ದಲ್ಲದೆ, ಉಜಿರೆಗೆ ಬನ್ನಿ' ಎಂದು ತಿಳಿಸಿದ್ದಾನೆ. ಅದರಂತೆ ಸುರೇಶ್ ನಾಯ್ಕ ಉಜಿರೆಗೆ ಬಂದಾಗ ಆರೋಪಿಗಳಾದ ಪ್ರವೀಣ್ ನಾಯ್ಕ, ವಿನಯ್, ಪ್ರಕಾಶ್, ಲೋಕೇಶ್, ನಾಗರಾಜ್ ಒಟ್ಟು ಸೇರಿ ಮಾರುತಿ ಓಮ್ನಿಯಲ್ಲಿ ಸುರೇಶ್ ನನ್ನು ಪಟ್ರಮೆ-ಧರ್ಮಸ್ಥಳ ರಸ್ತೆಯಲ್ಲಿ ಕರೆದುಕೊಂಡು ಹೋಗಿದ್ದಾರೆ. ಈ ಸಂದರ್ಭ ಯುವಕನಲ್ಲಿ ಮದುವೆ ನಿರಾಕರಿಸಲು ತಂಡ ಒತ್ತಡ ಹಾಕಿದ್ದು, ಇದಕ್ಕೆ ಒಪ್ಪದಿದ್ದಾಗ ಕುತ್ತಿಗೆಗೆ ಹಗ್ಗದಿಂದ ಬಿಗಿದು ಕೊಲೆ ಮಾಡಿದ್ದಾರೆ.



ಸುರೇಶ್ ನಾಯ್ಕ

ನಂತರ ಆನಂದ್ ನಾಯ್ಕ ಸೇರಿ ಧರ್ಮಸ್ಥಳದ ಅವೆಕ್ಕಿಯ ತಗ್ಗು ಪ್ರದೇಶದಲ್ಲಿ ಮೃತದೇಹಕ್ಕೆ ಗೋಣಿ ಚೀಲವನ್ನು ಸುತ್ತಿ ಪೆಟ್ರೋಲ್ ಹಾಕಿ ಗುರುತು ಸಿಗದಂತೆ ಸುಟ್ಟು ಹಾಕಿದ್ದಾರೆ. ಮೃತಪಟ್ಟ ವ್ಯಕ್ತಿಯ ಸೊತ್ತುಗಳನ್ನು ಕೊಯ್ಯೂರು ಕಟ್ಟ ಎಂಬಲ್ಲಿ ಮೋರಿಯ ಕೆಳಗೆ ಸುಟ್ಟು ಹಾಕಿದ್ದರು. ಈ ಪ್ರಕರಣ ಧರ್ಮಸ್ಥಳ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದು, ಆರು ಮಂದಿ ಆರೋಪಿಗಳನ್ನು ಮೇ 4ರಂದು ಬಂಧಿಸಲಾಗಿತ್ತು.

ಧರ್ಮಸ್ಥಳ ಪೊಲೀಸ್ ಠಾಣೆಯ ಹಿಂದಿನ ಇನ್‌ಸ್ಪೆಕ್ಟರ್ ಟಿ.ಪಿ. ರಾಮಲಿಂಗೇಗೌಡ ಪ್ರಕರಣದ ಸಮಗ್ರ ವಿಚಾರಣೆ ನಡೆಸಿ ದೋಷಾರೋಪಣ ಪಟ್ಟಿ ಸಲ್ಲಿಸಿದ್ದರು.

ಪ್ರಕರಣದ ಸಮಗ್ರ ವಿಚಾರಣೆ ನಡೆಸಿದ 1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶ ಟಿ.ಪಿ. ರಾಮಲಿಂಗೇಗೌಡ ಆರೋಪ ಸಾಬೀತುಪಡಿಸಿ ತೀರ್ಪು ನೀಡಿದ್ದಾರೆ. ಅಪರಾಧಿಗಳ ವಿರುದ್ಧ ಐಪಿಸಿ 302 (ಕೊಲೆ), 201 (ಸಾಕ್ಷನಾಶ), 120ಬಿ (ಸಂಚು), 149 (ಸಮಾನ ಉದ್ದೇಶಿತ ಕೃತ್ಯ) ಪ್ರಕರಣ ಸಾಬೀತುಗೊಂಡಿದೆ. ಪ್ರಕರಣದಲ್ಲಿ 33 ಮಂದಿ ಸಾಕ್ಷಿ ವಿಚಾರಣೆ ನಡೆಸಲಾಗಿದೆ. ಶಿಕ್ಷೆ ಪ್ರಮಾಣವು ಜು.28ಕ್ಕೆ ಪ್ರಕಟವಾಗಲಿದೆ.

ಸರಕಾರದ ಪರವಾಗಿ ಪಬ್ಲಿಕ್ ಪ್ರಾಸಿಕ್ಯೂಟರ್ ಶೇಖರ್ ಶೆಟ್ಟಿ ವಾದಿಸಿದ್ದರು.

# ಮಂಗಳೂರು ಮಹಾನಗರ ಪಾಲಿಕೆಯ ಸಹಾಯಕ ನಗರ ಯೋಜನಾಧಿಕಾರಿ ಆರೋಪ ಸಾಬೀತು

## ಐದು ವರ್ಷ ಸಜೆ ಹಾಗೂ 34 ಲಕ್ಷ ರೂ. ದಂಡ

ಮಂಗಳೂರು ಮಹಾನಗರ ಪಾಲಿಕೆಯ ಸಹಾಯಕ ನಗರ ಯೋಜನಾಧಿಕಾರಿ(ಎಟಿಪಿಒ) ಬಿ.ಪಿ.ಶಿವರಾಜು ಆದಾಯ ಮೀರಿದ ಆಸ್ತಿ ಹೊಂದಿದ್ದ ಆರೋಪದಲ್ಲಿ ಲೋಕಾಯುಕ್ತ ವಿಶೇಷ ನ್ಯಾಯಾಲಯ ಐದು ವರ್ಷ ಸಜೆ ಹಾಗೂ 34 ಲಕ್ಷ ರೂ. ದಂಡ ವಿಧಿಸಿ ತೀರ್ಪು ನೀಡಿದೆ.

2007ರಲ್ಲಿ ಲೋಕಾಯುಕ್ತ ದಾಳಿಗೊಳಗಾಗಿ ಸೇವೆಗೆ ಸೇರಿದ ವರ್ಷದಿಂದ ದಾಳಿ ನಡೆದ ದಿನಾಂಕವರೆಗೆ 17 ಲಕ್ಷ ರೂ.ನಷ್ಟು ಆದಾಯಕ್ಕಿಂತ ಹೆಚ್ಚಿನ ಆಸ್ತಿಯನ್ನು ಆರೋಪಿ ಬಿ.ಪಿ.ಶಿವರಾಜು ಹೊಂದಿದ್ದ ಎಂದು ಸಾಬೀತಾದ ಹಿನ್ನೆಲೆಯಲ್ಲಿ ಲೋಕಾಯುಕ್ತ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಬಿ.ಬಿ.ಜಕಾತಿ ಸೋಮವಾರ ಶಿಕ್ಷೆ ಪ್ರಕಟಿಸಿದ್ದಾರೆ.

ನ್ಯಾಯಾಧೀಶರಿಂದ 106 ಪುಟಗಳ ಸುದೀರ್ಘ ಆದೇಶ ಹೊರಬಂದಿದೆ. ಭ್ರಷ್ಟಾಚಾರ ನಿಗ್ರಹ ಕಾಯ್ದೆಯ ಕಲಂ 13 (1) (ಇ) ರ ಜೊತೆಗೆ 13(2) ರ ಅಡಿ ಅಪರಾಧ ಸಾಬೀತಾಗಿದೆ. ಆರೋಪಿ ಅಸೌಖ್ಯದ ಕಾರಣ ನೀಡಿ ಶಿಕ್ಷೆ ಪ್ರಮಾಣ ಕಡಿಮೆ ಮಾಡಬೇಕೆಂದು ನ್ಯಾಯಾಲಯಕ್ಕೆ ಬೇಡಿಕೆ ಸಲ್ಲಿಸಿದ್ದ. ಆದರೆ ಇದು ಭ್ರಷ್ಟಾಚಾರ ಪ್ರಕರಣವಾದ್ದರಿಂದ ಗರಿಷ್ಠ ಶಿಕ್ಷೆ ವಿಧಿಸುವಂತೆ ಸರ್ಕಾರಿ ಅಭಿಯೋಜಕರು ಕೋರಿದ್ದರು. ಸದ್ಯ ಅಪರಾಧಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಭ್ರಷ್ಟಾಚಾರ ಸಮಾಜದಲ್ಲಿ ಕ್ಯಾನ್ಸರ್ ಇದ್ದಂತೆ. ಅಪರಾಧಿಗೆ ರಿಯಾಯಿತಿ ಸರಿಯಲ್ಲ ಎಂದು ನ್ಯಾಯಾಧೀಶ ಬಿ.ಬಿ.ಜಕಾತಿಯವರು ತಮ್ಮ ಆದೇಶದಲ್ಲಿ ತಿಳಿಸಿದ್ದು, 14 ವರ್ಷಗಳಿಂದ 17 ಲಕ್ಷ ರೂ. ಅಕ್ರಮ ಆಸ್ತಿಯನ್ನು ಅಪರಾಧಿ ಅನುಭವಿಸಿರುವುದರಿಂದ ಎರಡು ಪಟ್ಟು ದಂಡ ವಿಧಿಸುವುದು ಸೂಕ್ತ ಎಂದು ಆದೇಶಿಸಿದರು.

ಏನಿದು ಪ್ರಕರಣ?: 2007ರ ಜುಲೈ 25ರಂದು ಪಾಲಿಕೆ ಎಟಿಪಿಒ ಶಿವರಾಜು ಸೇವಾ ಅವಧಿಯಲ್ಲಿ ನಿಗದಿತ ಆದಾಯಕ್ಕಿಂತಲೂ ಮೀರಿ ಆಸ್ತಿ ಹೊಂದಿದ್ದಾರೆಂದು ಆಗಿನ ಲೋಕಾಯುಕ್ತ ಇನ್‌ಸ್ಪೆಕ್ಟರ್ ಪ್ರಸನ್ನ ವಿ. ರಾಜು ಮಾಹಿತಿ ಕಲೆ ಹಾಕಿದ್ದರು. ಆಗಿನ ಲೋಕಾಯುಕ್ತ ಉಪಾಧೀಕ್ಷಕರು ಮತ್ತು ಅವರ ತಂಡ ದಾಳಿ ನಡೆಸಿ ಹಲವು ದಾಖಲೆಗಳನ್ನು ವಶ ಪಡಿಸಿಕೊಂಡಿದ್ದರು. ಆದಾಯಕ್ಕಿಂತ 38 ಲಕ್ಷ ರೂ. ಹೆಚ್ಚಿನ ಆಸ್ತಿ ಪತ್ತೆಯಾದ ಬಗ್ಗೆ ವರದಿಯಾಗಿತ್ತು. ಆಗ ಡಿವೈಎಸ್‌ಪಿ ಆಗಿದ್ದ ಡಾ.ಪ್ರಭುದೇವ್ ಮಾಣೆ ಆರೋಪಿ ವಿರುದ್ಧ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ಅಭಿಯೋಜನೆಯ ಪರವಾಗಿ 27 ಸಾಕ್ಷಿದಾರರನ್ನು ವಿಚಾರಣೆಗೆ ಒಳಪಡಿಸಿ 160 ದಾಖಲೆಗಳನ್ನು ಹಾಜರುಪಡಿಸಲಾಗಿತ್ತು. ವಿಚಾರಣೆ ನಡೆಸಿದ ಮಂಗಳೂರು ಲೋಕಾಯುಕ್ತ ವಿಶೇಷ ನ್ಯಾಯಾಲಯ ಸರ್ಕಾರಿ ವಿಶೇಷ ಅಭಿಯೋಜಕ ಕೆ.ಎಸ್.ಎನ್. ರಾಜೇಶ್ ಅವರ ವಾದ ಪುರಸ್ಕರಿಸಿ, ಆರೋಪ ಸಾಬೀತಾಗಿದೆ ಎಂದು ತೀರ್ಮಾನಕ್ಕೆ ಬಂದಿದೆ.



ಬಿ.ಪಿ.ಶಿವರಾಜು


**Artist Wanted ಕಲಾವಿದರು ಬೇಕಾಗಿದ್ದಾರೆ**

**ಕಿರು ಚಿತ್ರದಲ್ಲಿ ನಟಿಸಲು ಆಸಕ್ತಿ ಇರುವ ತುಳುಭಾಷೆ ಬಲ್ಲ ಕಲಾವಿದರು.**

**ಹುಡುಗ/ಹುಡುಗಿ 10 ರಿಂದ 16 ವರುಷ**

**ಯುವಕ/ಯುವತಿ 18 ರಿಂದ 24 ವರುಷ**

**ಪುರುಷ/ಮಹಿಳೆ 30 ರಿಂದ 45 ವರುಷ**

**ಸಂಪರ್ಕಿಸಿ 9886584559**

megamedia Entertainments

Volume:11, Issue : 2. July.15-31, 2021, Publishing from Mangalore, KARKAN/21312/10/1/2011-TC, **RNI No. KARKAN/2011/47430**, MEGA MEDIA NEWS Kannada Fortnightly, Page No.8 Rs.8/-



# 'ಅಭತರ' ತುಳು ಸಿನೆಮಾ ಅಕ್ಟೋಬರ್ ನಲ್ಲಿ ರಿಲೀಸ್

ಬೊಳ್ಳಿ ಮೂವೀಸ್ ರವರ ಐದನೇ ತುಳು ಸಿನೆಮಾ 'ಅಭತರ'(ಮಾತೆರ್ನಲ) ಅಕ್ಟೊಬರ್ ನಲ್ಲಿ ರಿಲೀಸ್ ಆಗಲಿದೆ ಎಂದು ಚಿತ್ರ ತಂಡ ಹೇಳಿದೆ. ಸಿನೆಮಾದ ಡಬ್ಬಿಂಗ್ ಮುಗಿದಿದ್ದು ಈಗ ಸೆನ್ಸಾರ್ ಮಂಡಳಿಯ ಅನುಮತಿಗೆ ಕಾಯುತ್ತಿದೆ.

ಮೂವತ್ತು ಜನ ಕಲಾವಿದರು ನಟಿಸಿದ ಈ ಸಿನೆಮಾದಲ್ಲಿ ಇಪ್ಪತ್ತು ಮಂದಿ ತಂತ್ರಜ್ಞರು ಕೆಲಸಮಾಡಿದ್ದಾರೆ. ಅರ್ಜುನ್ ಕಾಫಿಕಾಡ್ ನಿರ್ದೇಶನದ 'ಅಭತರ' ಸಿನೆಮಾದ ಕಥೆ,ಚಿತ್ರ ಕಥೆ, ಸಂಭಾಷಣೆ ಮತ್ತು ಸಾಹಿತ್ಯ ದೇವದಾಸ್ ಕಾಫಿಕಾಡ್ ಅವರದು.




ನಾಯಕ ನಟನಾಗಿ ಸ್ವತಃ ಅರ್ಜುನ್ ಕಾಪಿಕಾಡ್ ಅಭಿನಯಿಸಿದ್ದು ನಾಯಕಿಯರಾಗಿ ಗಾನಾ ಭಟ್ ಮತ್ತು ಕ್ರಿಸ್ಟಿನಾ ಅಭಿನಯಿಸಿದ್ದಾರೆ. ಸುನಿಲ್ ಗುರು ಖಳನಾಯಕನ ಪಾತ್ರದಲ್ಲಿದ್ದಾರೆ.

ಕೇವಲ ಹದಿಮೂರು ದಿನಗಳಲ್ಲಿ ಚಿತ್ರೀಕರಣಗೊಂಡ ಚಿತ್ರದ ಡಬ್ಬಿಂಗನ್ನು ಬೆಂಗಳೂರಿನ ರಾಜೇಶ್ ರಾಮನಾಥನ್ ಸ್ಟುಡಿಯೋದಲ್ಲಿ ಮಾಡಲಾಗಿದೆ. ಎಡಿಟಿಂಗ್ ಸುಜಿತ್ ನಾಯಕ್ ಮಾಡಿದ್ದಾರೆ. ಎರಡು ಹಾಡುಗಳಿದ್ದು ಸಂಗೀತ ನಿರ್ದೇಶನವನ್ನು ನಕುಲ ಅಭಯಂಕರ್ ಮಾಡಿದ್ದಾರೆ.

ಎರಡು ಗಂಟೆ ಹತ್ತು ನಿಮಿಷ ಹಾಸ್ಯಮಯ ಮತ್ತು ಕಥೆ ಇರುವ ಈ ಸಿನೆಮಾದಲ್ಲಿ, ದೇವದಾಸ್ ಕಾಫಿಕಾಡ್, ಅರ್ಜುನ್ ಕಾಫಿಕಾಡ್, ಅರವಿಂದ್ ಬೋಳಾರ್, ನವೀನ ಡಿ ಪಡೀಲ್, ಭೋಜರಾಜ್ ವಾಮಂಜೂರ್, ಸಾಯಿ ಕೃಷ್ಣ ಕುಡ್ಲ, ಗಾನಾ ಭಟ್, ಕ್ರಿಸ್ಟಿನಾ, ಸುನಿಲ್ ಗುರು ಮೊದಲಾದವರು ಅಭಿನಯಿಸಿದ್ದಾರೆ.

ಛಾಯಾ ಗ್ರಹಣ ವಿಷ್ಣುಪ್ರಸಾದ್, ಜಾಕೋಬ್ ಜಾನ್ಸನ್, ಸಹ ನಿರ್ದೇಶನ ಸುನಿಲ್ ಗುರು, ಪ್ರಶಾಂತ್ ಆಳ್ವಾ, ವಿಕ್ರಂ ದೇವಾಡಿಗ, ಸಹ ನಿರ್ಮಾಪಕ ಸಂದೀಪ್ ಶೆಟ್ಟಿ, ವೇಷಭೂಷಣ ಶರತ್ ಪೂಜಾರಿ, ನಿರ್ಮಾಣ ಅಭೂತ್ ಕುಮಾರ್, ಪ್ರಚಾರ ಕಲೆ ಎಡಿಟಿವ್ ಕ್ರಿಯೇಷನ್, ನಿರ್ಮಾಣ ತಂಡದಲ್ಲಿ – ಲಹೀಶ್ ನೀಲ್, ರಾಜೇಶ್ ಕೊಳಕೆ, ದೀಕ್ಷಿತ್ ಕುಲಾಲ್, ಪ್ರಸನ್ನ (ಮುನ್ನಾ), ದಯಾನಂದ್ ಕಾಮತ್, ರಾಜೇಶ್ ಅಮೀನ್, ಸಂತೋಷ್ ಆಚಾರ್ಯ ಮೊದಲಾದವರು ಕೆಲಸ ಮಾಡಿದ್ದಾರೆ.

# ನೀಲಿ ಚಿತ್ರ ಮಾಡುವ ಮೂಲಕ ಕೋಟಿ ಹಣ ಸಂಪಾದನೆ ಮಾಡುತ್ತಿದ್ದ ರಾಜ್ ಕುಂದ್ರಾ

ಮಾಡೆಲಿಂಗ್ ಮತ್ತು ನಟನೆಗೆ ಅವಕಾಶ ಹುಡುಕಿ ಮುಂಬೈಗೆ ಬರುವ ಮಾಡೆಲ್, ಕಲಾವಿದರನ್ನು, ಕೆಲಸಗಾರರನ್ನು ತನ್ನ ಬಲೆಗೆ ಬೀಳಿಸಿ ಬಳಿಕ ನೀಲಿ ಚಿತ್ರಗಳಲ್ಲಿ ಅಭಿನಯಿಸುವಂತೆ ಮಾಡುತ್ತಿದ್ದ. ತೊಡಗಿದ್ದ ಆರೋಪದಲ್ಲಿ ಉದ್ಯಮಿ ರಾಜ್ ಕುಂದ್ರಾ ಅವರನ್ನು ಬಂಧಿಸಲಾಗಿದೆ.

ಅವರನ್ನು ಜ.23ರವರೆಗೂ ಪೊಲೀಸ್ ವಶಕ್ಕೆ ಒಪ್ಪಿಸಲಾಗಿದೆ. ಕುಂದ್ರಾ, ಅಶ್ಲೀಲ ವಿಡಿಯೋ ಮೂಲಕ ಹಣ ಸಂಪಾದನೆ ಮಾಡುತ್ತಿದ್ದ ಬಗ್ಗೆ ಖಚಿತ ಸಾಕ್ಷ್ಯವಿದೆ. ಅವರನ್ನು ಇನ್ನಷ್ಟು ವಿಚಾರಣೆಗೆ ಒಳಪಡಿಸಬೇಕಿದೆ. ರಾಜ್ ಕುಂದ್ರಾ ಬೇರೆ ಬೇರೆ ಆಪ್‌ಗಳಿಗೆ ನೀಲಿ ಚಿತ್ರ ಮಾರಾಟ ಮಾಡುವ ಮೂಲಕ ಹಣ ಸಂಗ್ರಹಿಸುತ್ತಿದ್ದ ಎಂದು ಪೊಲೀಸರು ನ್ಯಾಯಾಲಯಕ್ಕೆ ಮಾಹಿತಿ ನೀಡಿದ್ದಾರೆ. ಹೀಗಾಗಿ ಅವರನ್ನು ಗರಿಷ್ಠ ಅವಧಿಗೆ ತಮ್ಮ ವಶಕ್ಕೆ ನೀಡುವಂತೆ ಪೊಲೀಸರು ಕೋರ್ಟ್‌ಗೆ ಮನವಿ ಮಾಡಿದ್ದರು.



ಬ್ಲೂ ಫಿಲಂ ನಿರ್ಮಾಣ, ನ್ಯೂಡ್ ಫೋಟೋ ಶೂಟ್ ಚಿತ್ರೀಕರಣ ಮತ್ತು ಅದರ ವ್ಯಾಪಾರದಲ್ಲಿ ಅಲ್ಲದೆ ಹಲವು ಆ?ಯಪ್‌ಗಳ ಮೂಲಕ ಕುಂದ್ರಾ ಇಂಥ ದಂಧೆ ನಡೆಸುತ್ತಿದ್ದ ಬಗೆಗಿನ ಹಲವು ವಾಟ್ಸಾಪ್ ಸಂದೇಶಗಳು ಲಭ್ಯವಾಗಿದೆ. ಕುಂದ್ರಾ ಬಂಧನದ ಬೆನ್ನಲ್ಲೇ ಆತನಿಂದ ವಂಚನೆಗೆ ಒಳಗಾದ ಮೂರು ಮಹಿಳೆಯರು ದೂರು ನೀಡಲು ಮುಂದೆ ಬಂದಿದ್ದಾರೆ.

ಕುಂದ್ರಾನ ಆಪ್ತ ಉಮೇಶ್ ಕಾಮತ್ ಎಂಬಾತನನ್ನೂ ನೀಲಿ ಚಲನಚಿತ್ರ ನಿರ್ಮಾಣ ಪ್ರಕರಣ ಸಂಬಂಧ ಪೊಲೀಸರು ಬಂಧಿಸಿದ್ದಾರೆ. ಈ ಸುದ್ದಿ ಬೆಳಕಿಗೆ ಬರುತ್ತಿದ್ದಂತೆಯೇ ಸಿನಿ ಇಂಡಸ್ಟ್ರಿಯ ಅನೇಕರು ತಮ್ಮದೇ ಆರೋಪಗಳನ್ನ ಮಾಡುತ್ತಿದ್ದಾರೆ. ವಿವಾದದ ಮೂಲಕವೇ ಹೆಚ್ಚು ಸುದ್ದಿಯಲ್ಲಿರುವ ಮಾಡೆಲ್ ಪೂನಮ್ ಪಾಂಡೆ ಹಾಗೂ ಶೆರ್ಲಿನ್ ಚೋಪ್ರಾ ಕೂಡ ಈ ಪ್ರಕರಣದ ಸಂಬಂಧ ಕೆಲ ಆರೋಪಗಳನ್ನ ಮಾಡಿದ್ದಾರೆ.

ಇದರ ಜೊತೆಯಲ್ಲಿ ಯುಟ್ಯೂಬರ್ ಪುನೀತ್ ಕಛರ್ ಸಹ ಕುಂದ್ರಾ ವಿರುದ್ಧ ಆರೋಪಿಸಿದ್ದಾರೆ. ರಾಜ್ ಕುಂದ್ರಾ ಮತ್ತು ಬ್ರಿಟನ್‌ನಲ್ಲಿ ವಾಸಿಸುತ್ತಿರುವ ಅವರ ಸಹೋದರ ಇಬ್ಬರೂ ಸೇರಿ ಕೆನ್ರಿನ್ ಹೆಸರಿನ ಕಂಪನಿಯನ್ನು ಆರಂಭಿಸಿದ್ದರು. ನೀಲಿ ಚಿತ್ರಗಳನ್ನು ಭಾರತದಲ್ಲಿ ಚಿತ್ರೀಕರಿಸಿ ನಂತರ ವಿ ಟ್ರಾನ್ಸ್‌ಫರ್ (ಫೈಲ್ ವರ್ಗಾವಣೆ ಸೇವೆ) ಮೂಲಕ ಅದು ಈ ಕಂಪನಿ ಸೇರುತ್ತಿತ್ತು. ಭಾರತದ ಸೈಬರ್ ಕಾನೂನಿಂದ ತಪ್ಪಿಸಿಕೊಳ್ಳಲು ಈ ಕಂಪನಿಯನ್ನು ವಿದೇಶದಲ್ಲಿ ನೋಂದಾಯಿಸಿಕೊಳ್ಳಲಾಗಿತ್ತು.

ರಾಜ್ ಬಂಧನದ ನಂತರ, ಅಕ್ಟೋಬರ್‌ನಲ್ಲಿ ನಡೆದ ಕೆಲವು ವಾಟ್ಸಾಪ್ ಚಾಟ್‌ಗಳು ಹೊರ ಬಂದಿವೆ. ಪಾರ್ನ್ ಸಿನಿಮಾ ವ್ಯವಹಾರದಿಂದ ರಾಜ್ ಕುಂದ್ರಾ ಸಾಕಷ್ಟು ಹಣ ಸಂಪಾದಿಸಿದ್ದರು ಎಂಬುದು ಬಹಿರಂಗವಾಗಿದೆ. ಎಚ್ ಅಕೌಂಟ್ಸ್ ಹೆಸರಿನ ಗ್ರೂಪ್‌ನ ಚಾಟ್‌ಗಳು ಇವಾಗಿದೆ. ಇದರ ಅಡ್ಮಿನ್ ರಾಜ್ ಕುಂದ್ರಾ. ಈ ಗ್ರೂಪ್‌ನಲ್ಲಿ ರಾಜ್ ಅವರು ತಮ್ಮ ಸಂಬಂಧಿ ಮತ್ತು ಕೆನ್ರಿನ್ ಪ್ರೊಡಕ್ಷನ್ ಹೌಸ್ ಅಧ್ಯಕ್ಷ ಪ್ರದೀಪ್ ಭಕ್ಷಿ ಅವರೊಂದಿಗೆ ಹಣದ ವ್ಯವಹಾರದ ಬಗ್ಗೆ ಚರ್ಚಿಸಿರುವುದು ಕಂಡು ಬಂದಿದೆ. ಸಿನಿಮಾದಿಂದ ದಿನಕ್ಕೆ ಲಕ್ಷಾಂತರ ರೂಪಾಯಿ ಹಣ ಬರುತ್ತಿತ್ತು ಎಂಬುದು ಚಾಟ್‌ನಿಂದ ಗೊತ್ತಾಗಿದೆ.

ಈ ಗ್ರೂಪ್‌ನಲ್ಲಿ ಐದು ಜನರಿದ್ದಾರೆ. ಪ್ರದೀಪ್ ಮತ್ತು ರಾಜ್ ಕುಂದ್ರಾ ನಡುವೆ ವ್ಯವಹಾರದಲ್ಲಿನ ಗಳಿಕೆ, ಮಾರ್ಕೆಟಿಂಗ್ ತಂತ್ರ, ಅಶ್ಲೀಲ ಸಿನಿಮಾದಲ್ಲಿ ನಟಿಸಿದವರಿಗೆ ಸಂಭಾವನೆ ಸಿಕ್ಕಿದೆಯೋ ಅಥವಾ ಇಲ್ಲವೋ ಎಂಬ ಬಗ್ಗೆ ಮುಕ್ತ ಚರ್ಚೆ ನಡೆದಿದೆ. ಇದು ಪೊಲೀಸರಿಗೆ ಮಹತ್ವದ ದಾಖಲೆಯಾಗಿದೆ.

2019ರಲ್ಲಿ ನಾನು ಆಫ್ಟರ್ ಮೀ ಎಂಬ ಅಪ್ಲಿಕೇಶನ್ ಜೊತೆ ಕೆಲಸ ಮಾಡಿದ್ದೆ. ಒಪ್ಪಂದದ ವೇಳೆಯಲ್ಲಿ ನಾನು ಈ ಆಪ್ ಮಾಲೀಕರ ಜೊತೆ ಆದಾಯ ಹಂಚಿಕೆಯ ಬಗ್ಗೆಯೂ ಮಾತನಾಡಿದ್ದೆ. ಆದರೆ ಒಪ್ಪಂದದ ಪ್ರಕಾರ ಆದಾಯ ಹಂಚಿಕೆ ಆಗುತ್ತಿಲ್ಲ ಎಂಬುದು ನನಗೆ ತಿಳಿದ ಬಳಿಕ ನಾನು ಈ ಒಪ್ಪಂದದಿಂದ ಹೊರನಡೆದಿದ್ದೆ. ನಾನು ಈ ವ್ಯವಹಾರದಿಂದ ಹೊರಬಂದ ಬಳಿಕವೂ ನನ್ನ ವಿಡಿಯೋ ಹಾಗೂ ಫೋಟೋಗಳನ್ನ ಅಪ್ಲಿಕೇಶನ್‌ನಲ್ಲಿ ಪೋಸ್ಟ್ ಮಾಡುವ ಕೆಲಸವನ್ನ ಮುಂದುವರಿಸಿದ್ದರು ಎಂದು ಪೂನಂ ಪಾಂಡೆ ಹೇಳಿದ್ದಾರೆ.

ಮತ್ತೊಬ್ಬ ಮಾಡೆಲ್ ಸಾಗ್ರಿಕಾ, ರಾಜ್ ಕೂಡ ಭಾಗಿಯಾಗಿದ್ದ ಆಡಿಷನ್ ಒಂದರ ಬಗ್ಗೆ ಮಾತನಾಡಿದ್ದಾರೆ. ಆಡಿಷನ್ ವೇಳೆ ನನ್ನ ಬಳಿ ಬೆತ್ತಲೆಯಾಗಿ ವಾಟ್ಸಾಪ್ ಮೂಲಕ ವಿಡಿಯೋ ಚಾಟ್ ಮಾಡುವಂತೆ ಹೇಳಲಾಗಿತ್ತು. ಅಲ್ಲದೇ ಈ ಪ್ರಕರಣದಲ್ಲಿ ಶಿಲ್ಪಾ ಶೆಟ್ಟಿಯನ್ನೂ ತನಿಖೆಗೆ ಒಳಪಡಿಸಬೇಕು ಎಂದು ಅವರು ಆಗ್ರಹಿಸಿದ್ದಾರೆ. ಯುಟ್ಯೂಬರ್ ಪುನೀತ್ ಕೌರ್‌ಕೂಡ ಇನ್‌ಸ್ಟಾಗ್ರಾಂನಲ್ಲಿ ಕೇಸ್ ಸಂಬಂಧದ ಕೆಲವು ಕ್ಲಿಪ್‌ಗಳನ್ನು ಶೇರ್ ಮಾಡಿದ್ದಾರೆ.

ಶೆರ್ಲಿನ್‌ಚೋಪ್ರಾ ನೀಡಿರುವ ಹೇಳಿಕೆಯ ಪ್ರಕಾರ, ಅವರು ರಾಜ್ ಜೊತೆಯಲ್ಲಿ 15 ರಿಂದ 20 ಪ್ರಾಜೆಕ್ಟ್‌ಗಳನ್ನ ಮಾಡಿದ್ದಾರೆ. ಇದಕ್ಕಾಗಿ ಆಕೆಗೆ ರಾಜ್ ಕುಂದ್ರಾ ಪ್ರತಿ ಪ್ರಾಜೆಕ್ಟ್‌ಗೆ 30ಲಕ್ಷ ಹಣ ಪಾವತಿ ಮಾಡಿದ್ದಾರೆ ಎನ್ನಲಾಗಿದೆ.

Printed by Shivaprasad., Published by Shivaprasad., on behalf of( or owned by) Shivaprasad., and Printed at Digantha Mudrana Pvt. Ltd. Yeyyadi, Mangalore. and Published at Anwar Villa, Billal Compound, Goodshead Road, Mangalore-1, Karnataka. Editor : Shivaprasad., Mobile : 9886584559, E-Mail-info@megamedianews.in